# ಜೆಎಸ್‌ಎಸ್ ಮಾಸಪತ್ರಿಕೆ

ಜೆಎಸ್‌ಎಸ್ ಮಹಾವಿದ್ಯಾಪೀಠದ ವಾರ್ತಾಪತ್ರ

ಸಂಚಿಕೆ 75 ಫೆಬ್ರವರಿ 2009




## ಸುತ್ತೂರು ಜಾತ್ರೆ ರಥೋತ್ಸವದ ವೈಭವ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ರಥೋತ್ಸವವು ದಿನಾಂಕ 24.1.2009 ಶನಿವಾರ ಬೆಳಗ್ಗೆ 11 ಗಂಟೆಯ ಶುಭ ಮುಹೂರ್ತದಲ್ಲಿ ವಿಜೃಂಭಣೆಯಿಂದ ನೆರವೇರಿತು. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯ ಮತ್ತು ನಾಡಿನ ವಿವಿಧ ಮಠಾಧೀಶರು, ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಕರ್ತೃಗದ್ದುಗೆಯ ಮುಂಭಾಗದಿಂದ ಹೊರಟ ಈ ಉತ್ಸವ ಭಕ್ತರ ನಯನಮನೋಹರವೂ ಭಕ್ತಿಪರವೂ ಆಗಿ ಕಂಡುಬಂದಿತು. ಸಹಸ್ರ ಸಹಸ್ರ ಜನಸ್ತೋಮ ಈ ದೈವದೃಶ್ಯವನ್ನು ನೋಡಿ ಮುದಗೊಂಡು, ಆನಂದತುಂದಿಲವಾಯಿತು.

ಶ್ರೀಮಠದ ಸಕಲ ಬಿರುದಾವಳಿಗಳು, ನಂದಿಧ್ವಜ, ಛತ್ರಿಚಾಮರ, ಸೂರಿಪಾನಿ, ಗಾರುಡಿ ಗೊಂಬೆ, ಮರಗಾಲು ನೃತ್ಯ, ವೀರಗಾಸೆ, ಡೊಳ್ಳು, ಪೂಜಾ ಕುಣಿತ, ಕರಡಿ ಮೇಳ, ನಾದಸ್ವರಗಳ ಹಿಮ್ಮೇಳದಲ್ಲಿ ನೆರೆ ರಾಜ್ಯಗಳ ಜನಪದ ಕಲಾತಂಡಗಳು ಭಾಗವಹಿಸಿದ್ದುದು ಇದಕ್ಕೆ ಒಂದು ರಾಷ್ಟ್ರೀಯ ಆಯಾಮವನ್ನೇ ಒದಗಿಸಿತು. ಲಿಂಗಧೀರನ ಕುಣಿತ ವರ್ಣವೈಭವವನ್ನು ಅರ್ಥ ವೈಭವನ್ನೂ ತುಂಬಿಕೊಂಡಿತ್ತು. ಭಾವಾವೇಶದಿಂದ ಭಕ್ತವೃಂದವು ಮಾಡುತ್ತಿದ್ದ ಘೋಷ ಮುಗಿಲು ಮುಟ್ಟುವಂತಿತ್ತು.

ಮೆರವಣಿಗೆಯಲ್ಲಿ ವಿಶ್ವಶರಣ ಧರ್ಮದ ಸಂದೇಶಗಳು ಮತ್ತು 'ಚಂದ್ರಯಾನ' 'ಜಲಿಯನ್‌ವಾಲಾ ಬಾಗ್', 'ದಕ್ಷಗರ್ವಭಂಗ' ಮುಂತಾದ ಶಬ್ದಚಿತ್ರಗಳು ಜನಮನವನ್ನು ಸೆಳೆಯುವಂತಿದ್ದವು.

□




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಜೆಎಸ್‌ಎಸ್ ಕಾಲೇಜಿನ ಸುವರ್ಣ ಮಹೋತ್ಸವ ಉದ್ಘಾಟನೆಯನ್ನು ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ನೆರವೇರಿಸುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀಗಳವರು ಹಾಗೂ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಎನ್. ಧರಮ್ ಸಿಂಗ್, ಶ್ರೀ ಶಾಮನೂರು ಶಿವಶಂಕರಪ್ಪ ಮತ್ತು ಪ್ರೊ. ಜೆ.ಎಸ್. ಪಾಟೀಲ್‌ರವರು



ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜನವರಿ 2009ರಲ್ಲಿ ನಡೆದ ವಿಶೇಷ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಮೈಸೂರಿನ ಹಾಗೂ ಅಮೆರಿಕದ ಕಲಾವಿದರ ಸಮ್ಮಿಶ್ರ ಸಂಗೀತವೈವಿಧ್ಯ



ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ವಿಜ್ಞಾನ ಮತ್ತು ಸಮಾಜ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ನಡೆದ ಗ್ರಾಮೀಣ ಪ್ರೌಢಶಾಲೆಗಳಲ್ಲಿ ಬೋಧನಾ ಗುಣಮಟ್ಟ ಉತ್ತಮೀಕರಣ ಯೋಜನೆಯನ್ನು ಡಾ. ಆರ್. ಚಿದಂಬರಂ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀಗಳವರು, ಶ್ರೀ ಜಿ. ಕುಮಾರ್ ನಾಯಕ್, ಶ್ರೀ ಎಸ್. ಬಿ. ಮುದ್ದಪ್ಪ, ಪ್ರೊ. ಎಂ.ಐ. ಸವದತ್ತಿ, ಡಾ. ಕೆ. ಸಿದ್ದಪ್ಪ

# ಸುತ್ತೂರು ಶ್ರೀಕ್ಷೇತ್ರದಲ್ಲಿ ವಿಜೃಂಭಣೆಯ ಜಾತ್ರಾ ಮಹೋತ್ಸವ

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 22.1.2009 ರಿಂದ 27.1.2009ರ ವರೆಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.



ಶ್ರೀ ಕರ್ತೃಗದ್ದುಗೆ, ಶ್ರೀ ಸೋಮೇಶ್ವರ ದೇವಸ್ಥಾನ, ಶ್ರೀ ವೀರಭದ್ರೇಶ್ವರ ದೇವಸ್ಥಾನ ಹಾಗೂ ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ತ್ರಿಕಾಲ ಪೂಜೆ, ವಿವಿಧ ಸೇವಾ ಕೈಂಕರ್ಯಗಳು ಮೊದಲಾದ ಧಾರ್ಮಿಕ ಆಚರಣೆಗಳು ಶಾಸ್ತ್ರೋಕ್ತವಾಗಿ ನೆರವೇರಿದವು.

ಜಾತ್ರಾ ಮಹೋತ್ಸವದ ಅಂಗವಾಗಿ ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ, ಬೆಳ್ಳಿ ಪಲ್ಲಕ್ಕಿ ಉತ್ಸವ, ಧರ್ಮಸಮ್ಮೇಳನ, ಭಜನಾಮೇಳ, ವಸ್ತುಪ್ರದರ್ಶನ, ಕುಸ್ತಿ ಪಂದ್ಯಾವಳಿ, ಕೃಷಿಮೇಳ, ದನಗಳ ಜಾತ್ರೆ ಹಾಗೂ 232 ಜೋಡಿಗಳ ಸಾಮೂಹಿಕ ವಿವಾಹ, ವಿವಿಧ ರಾಜ್ಯಗಳ ಜನಪದ ಕಲೆಗಳ ಪ್ರದರ್ಶನ, ಕ್ರೀಡಾಕೂಟ,



ಸಾಂಸ್ಕೃತಿಕ ಮೇಳ, ರಸಪ್ರಶ್ನೆ, ಸೋಬಾನೆ ಪದ, ರಂಗೋಲಿ ಸ್ಪರ್ಧೆಗಳನ್ನು ನಡೆಸಲಾಯಿತಲ್ಲದೆ, ನಿತ್ಯ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

'ಕರ್ನಾಟಕ ವೈಭವ' ಬೃಹತ್ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಆರು ದಿನಗಳ ಕಾಲ ನಡೆದು ಜನಮನ ಸೂರೆಗೊಂಡಿತು. ವಸ್ತುಪ್ರದರ್ಶನ, ಕೃಷಿಮೇಳಗಳಿಗೆ ಜನಸಾಗರವೇ ಹರಿದುಬಂತು. ಕೃಷಿಮೇಳದಲ್ಲಿ ಈ ಬಾರಿ 'ಸಂವಾದ' ಕಾರ್ಯಕ್ರಮವನ್ನೂ ಆಯೋಜಿಸಲಾಗಿತ್ತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಹಾಗೂ ಉತ್ತಮ ರಾಸುಗಳಿಗೆ ಬಹುಮಾನ ವಿತರಿಸಲಾಯಿತು.

ಪ್ರತಿನಿತ್ಯವೂ ಷಟ್ಸ್ಥಲ ಧ್ವಜಾರೋಹಣದೊಂದಿಗೆ ಆರಂಭಗೊಳ್ಳುತ್ತಿದ್ದ ಪೂಜಾ ವಿಧಿವಿಧಾನಗಳು ರಾತ್ರಿಯವರೆಗೂ ನಡೆದು ರುದ್ರಾಭಿಷೇಕ, ಪ್ರಾರ್ಥನೆ, ಪಥಸಂಚಲನ, ಪ್ರವಚನ, ಧರ್ಮಸಂದೇಶ, ಮಂಗಳಾರತಿಯೊಂದಿಗೆ ಮುಕ್ತಾಯಗೊಳ್ಳುತ್ತಿದ್ದುವು.

ಜಾತ್ರಾ ಮಹೋತ್ಸವಕ್ಕೆ ರಾಷ್ಟ್ರ, ರಾಜ್ಯ ನಾಯಕರ ದಂಡೇ ಆಗಮಿಸಿತ್ತು. ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶ್ರೀ ರಾಜನಾಥಸಿಂಗ್, ಶ್ರೀ ವಿಲಾಸ್‌ರಾವ್ ದೇಶ್‌ಮುಖ್, ಶ್ರೀ ಡಿ.ಕೆ. ಶಿವಕುಮಾರ್ ಸೇರಿದಂತೆ ಅನೇಕ ಸಚಿವರು, ವಿವಿಧ ಕ್ಷೇತ್ರಗಳ ಗಣ್ಯರು, ಉದ್ಯಮಿಗಳು, ಮಠಾಧೀಶರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಜಾತ್ರೆಗೆ ಬಂದ ಭಕ್ತರಿಗೆ ನಿತ್ಯ ಅನ್ನಸಂತರ್ಪಣೆ ನಡೆಸಲಾಯಿತು.

ಶ್ರೀಮಠದಿಂದ ಆದಿಜಗದ್ಗುರುಗಳವರ ಉತ್ಸವಮೂರ್ತಿಯನ್ನು ಕರ್ತೃಗದ್ದುಗೆಗೆ ಬಿಜಯಂಗೈಸಿಕೊಳ್ಳುವ ಮೂಲಕ ಜಾತ್ರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ದೊರೆಯಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಆರೋಗ್ಯಮೇಳವನ್ನು ಉದ್ಘಾಟಿಸಿ ಮಾತನಾಡಿದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಶ್ರೀ ವಿಲಾಸರಾವ್ ದೇಶಮುಖ್‌ರವರು ಬಸವ ಜಯಂತಿಯನ್ನು ಸರ್ಕಾರಿ ಸಮಾರಂಭವನ್ನಾಗಿ ಮೊದಲು ಆಚರಿಸಿದ ಹೆಮ್ಮೆ ಮಹಾರಾಷ್ಟ್ರದ್ದು ಎಂದು ಅಭಿಮಾನದಿಂದ ನುಡಿದರು. ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಶ್ರೀ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ತ್ಯಾಗದ ಮಹಾರೂಪವೇ ಶ್ರೀ ಶಿವರಾತ್ರೀಶ್ವರರು ಎಂದು ಬಣ್ಣಿಸಿದರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಡಿ.ಕೆ. ಶಿವಕುಮಾರ್‌ರವರು ಸುತ್ತೂರು ಜಾತ್ರೆಯಲ್ಲಿ ಭಾಗವಹಿಸುವುದೇ ಒಂದು ಭಾಗ್ಯವೆಂದರು. ದೋಣಿ ವಿಹಾರವನ್ನು ಉದ್ಘಾಟಿಸಿದ ಶ್ರೀ ಎಸ್.ಎ. ರಾಮದಾಸ್‌ರವರು ಭಾರತೀಯ ಸಂಸ್ಕೃತಿಯು ವಿಶ್ವಕ್ಕೇ ಮಾರ್ಗದರ್ಶಕವಾಗಿದೆ ಎಂದರು. ಕೃಷಿಮೇಳವನ್ನು ಉದ್ಘಾಟಿಸಿದ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳವರು ಸುತ್ತೂರು ಜಾತ್ರೆ ಜನಸಾಮಾನ್ಯರೆಲ್ಲರಿಗೂ ಮುದ ನೀಡುತ್ತಿದೆಯೆಂದರು.

## 24.1.2009

ಉಚಿತ ಸಾಮೂಹಿಕ ವಿವಾಹದಲ್ಲಿ 232 ಹೊಸ ಜೋಡಿಗಳು ಸತಿಪತಿಗಳಾದರು. ಈ ಸಂದರ್ಭದಲ್ಲಿ ಮಾತನಾಡಿದ ಗೃಹರಕ್ಷಕ ದಳದ ಆರಕ್ಷಕ ಮಹಾನಿರ್ದೇಶಕರಾದ ಶ್ರೀಮತಿ ಜೀಜಾ ಮಾಧವನ್ ಹರಿಸಿಂಗ್‌ರವರು ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂದು



ನವದಂಪತಿಗಳಿಗೆ ಕರೆ ನೀಡಿದರು. ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ನಗೆ ಉತ್ಸವದಲ್ಲಿ ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಎಂ.ಎಸ್. ನರಸಿಂಹಮೂರ್ತಿ, ಶ್ರೀ ಕೋಗಳಿ ಕೊಟ್ರೇಶ್, ಶ್ರೀ ಬಸವರಾಜ್ ಮಹಾಮನಿ, ಪ್ರೊ. ಸಿ.ಕೆ.ಎನ್. ರಾಜಾ ಅವರುಗಳು ಭಾಗವಹಿಸಿ ನೆರೆದ ಜನಸಮೂಹವನ್ನು ರಂಜಿಸಿದರು.

ಜನಪದ ಜಾತ್ರೆಯನ್ನು ಮಾಜಿ ಕೇಂದ್ರ ಸಚಿವ ಶ್ರೀ ಶಿವರಾಜ್ ಪಾಟೀಲ್‌ರವರು ಉದ್ಘಾಟಿಸಿದರು.

ಜೆಎಸ್‌ಎಸ್ ಅಂತರಸಂಸ್ಥೆಗಳ 17ನೇ ಕ್ರೀಡಾಕೂಟವನ್ನು ಖ್ಯಾತ ಕ್ರಿಕೆಟ್ ಪಟು ಪದ್ಮಶ್ರೀ ಅನಿಲ್ ಕುಂಬ್ಳೆಯವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರಾದ ಶ್ರೀ ಎಚ್. ವಿಶ್ವನಾಥ್, 'ಆಂದೋಲನ' ದಿನಪತ್ರಿಕೆಯ ಸಂಪಾದಕರಾದ ಶ್ರೀ ರಾಜಶೇಖರ ಕೋಟಿ, ಶ್ರೀ ಲಕ್ಷ್ಮಣ್ ಮೊದಲಾದವರು ಭಾಗವಹಿಸಿದ್ದರು.



## 25.1.2009

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವವು ಶನಿವಾರ ಬೆಳಗ್ಗೆ ವಿಜೃಂಭಣೆಯಿಂದ ನೆರವೇರಿತು. ಮೆರವಣಿಗೆಯಲ್ಲಿ ಸಹಸ್ರ ಸಹಸ್ರ ಜನ ಭಾಗವಹಿಸಿದ್ದರು. ಕಲಾತಂಡಗಳು, ಸ್ತಬ್ಧಚಿತ್ರಗಳು ಮೆರವಣಿಗೆಗೆ ಮೆರುಗು ನೀಡಿದವು. ದಾವಣಗೆರೆಯ ಶ್ರೀ ಪಂಚಮಸಾಲಿ ಜಗದ್ಗುರು ಪೀಠದ ಚರಪೀಠಾಧಿಪತಿಗಳಾದ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರು ಮಾತನಾಡಿ ಸುತ್ತೂರು ಶ್ರೀಮಠವು 'ಸರ್ವಜನಾಂಗದ ಶಾಂತಿಯ ತೋಟ' ಎಂದರು. ಡಾ. ಶಂಭು ವಿ. ಬಳಿಗಾರ್‌ರವರು ಮಾತನಾಡಿ ಜಾತ್ರೆಯ ನೋಟ ಹುಗ್ಗಿ ಉಂಡಷ್ಟು ಸಂತೋಷ ತಂದಿದೆ ಎಂದರೆ, ದಾವಣಗೆರೆಯ ಜವಳಿ ಉದ್ಯಮಿಗಳಾದ ಶ್ರೀ ಬಿ.ಸಿ. ಉಮಾಪತಿಯವರು ಮಾತನಾಡಿ ಮಾತಿಗಿಂತ ಕೃತಿ ಮೇಲು ಎಂದರು.

ದನಗಳ ಪರಿಷೆಯನ್ನು ಉದ್ಘಾಟಿಸಿ ಮಾತನಾಡಿದ ಮಾಜಿ ಸಚಿವ ಶ್ರೀ ಎಚ್. ಎಸ್. ಮಹದೇವಪ್ರಸಾದ್‌ರವರು ಸುತ್ತೂರು ಜಾತ್ರೆ ಸರ್ವ ಜನಾಕರ್ಷಣೀಯ ಜಾತ್ರೆ ಎಂದರು.

'ಜನಪದ ಜಾತ್ರೆ' ಸಮಾರೋಪ ಸಮಾರಂಭದಲ್ಲಿ ಶ್ರೀ ಎಚ್.ಡಿ. ರೇವಣ್ಣ, ಹೊಸಮಠದ ಶ್ರೀ ಚಿದಾನಂದಸ್ವಾಮಿಗಳು, ಶ್ರೀ ಶಂಕರಪ್ಪ,

ಶ್ರೀ ನಾಗರಾಜಮೂರ್ತಿ ಮೊದಲಾದವರು ಭಾಗವಹಿಸಿದ್ದರು. ಧಾರ್ಮಿಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಭಾರತ ಸರ್ಕಾರದ ಭೂ ಮತ್ತು ಜಲಸಾರಿಗೆ ರಾಷ್ಟ್ರೀಯ ಹೆದ್ದಾರಿ ರಾಜ್ಯ ಸಚಿವರಾದ ಶ್ರೀ ಕೆ.ಎಚ್. ಮುನಿಯಪ್ಪನವರು ಜೆಎಸ್‌ಎಸ್ ಒಂದು ಮಾದರಿ ಸಂಸ್ಥೆ ಎಂದು ನುಡಿದರು.

ಅಂತರ್‌ರಾಷ್ಟ್ರೀಯ ನಿಯತಕಾಲಿಕೆಯಾದ 'ಹಿಂದೂಯಿಸಂ ಟುಡೇ' ಪತ್ರಿಕೆಯ ಹಿರಿಯ ವರದಿಗಾರ್ತಿ ಶ್ರೀಮತಿ ಚೂಡಾಮಣಿ ನಾಗೇಂದ್ರರವರು ಮಾತನಾಡಿ ನಾವು ಮಾಡಿದ ತಪ್ಪುಗಳು ಮುಂದಿನ ಪೀಳಿಗೆಗೆ ಹೋಗುವಂತಾಗಬಾರದು ಎಂದರು.

ವಸತಿಗೃಹಗಳು ಹಾಗೂ ಉಪಾಹಾರ ಕೇಂದ್ರ ಕಟ್ಟಡಗಳ ಶಿಲಾನ್ಯಾಸವನ್ನು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೆರವೇರಿಸಿದರು. ಆನಂದಪುರ ಶ್ರೀ ಮುರುಘಾಮಠದ ಜಗದ್ಗುರುಗಳು, ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ, ಸಚಿವರಾದ ಶ್ರೀ ನರೇಂದ್ರಸ್ವಾಮಿ, ಕು. ಶೋಭಾ ಕರಂದ್ಲಾಜೆ, ಶ್ರೀ ವಿ. ಸೋಮಣ್ಣ, ಶ್ರೀ ಶಂಕರಲಿಂಗೇಗೌಡ ಮೊದಲಾದವರು ಉಪಸ್ಥಿತರಿದ್ದರು.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1050 ನೆಯ ಜಯಂತಿ ಮಹೋತ್ಸವವನ್ನು ಶಿವಮೊಗ್ಗದಲ್ಲಿ ನಡೆಸಲು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಜಗದ್ಗುರುಗಳವರಲ್ಲಿ ಕೋರಿದ ಮೇರೆಗೆ ಶ್ರೀಗಳವರ ಸಮ್ಮತಿಯನ್ನು ಸಭೆಯಲ್ಲಿ ಪ್ರಕಟಿಸಲಾಯಿತು.

**26.1.2009**

ಶ್ರೀಕ್ಷೇತ್ರದಲ್ಲಿ ನಡೆದ 60 ನೇ ಗಣರಾಜ್ಯೋತ್ಸವ ಸಮಾರಂಭದಂದು ಮಾಜಿ ರಾಷ್ಟ್ರಪತಿಗಳಾದ ಘನತೆವೆತ್ತ ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಧ್ವಜಾರೋಹಣ ನೆರವೇರಿಸಿ ಆಕರ್ಷಕ ಪಥಸಂಚಲನವನ್ನು ವೀಕ್ಷಿಸಿದರು. ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ಡಿ.ಇಡಿ. ಕಾಲೇಜಿನ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿದ ಅವರು ಅಲ್ಲಿನ ವಿದ್ಯಾರ್ಥಿಗಳೊಡನೆ 'ಸಂವಾದ' ನಡೆಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಸಂಸ್ಥೆಯು ಇದೇ ಮೊದಲ ಬಾರಿಗೆ "ಸುತ್ತೂರು ವಾರ್ತೆ" ಎಂಬ ಸಾಂದರ್ಭಿಕ ದೈನಿಕವನ್ನು ಹೊರತಂದಿತು.

ಕುಸ್ತಿ ಪಂದ್ಯಾವಳಿಯನ್ನು ಸಂಸದ ಶ್ರೀ ಎಂ. ಶಿವಣ್ಣ ಉದ್ಘಾಟಿಸಿದರು. ಮಾಜಿ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ, ಶಾಸಕರಾದ ಶ್ರೀ ಎಚ್.ಪಿ. ಮಂಜುನಾಥ್, ಶ್ರೀ ಪುಟ್ಟರಂಗಶೆಟ್ಟಿ, ಶ್ರೀ ಎಂ. ಶ್ರೀನಿವಾಸ್ ಮೊದಲಾದವರು ಭಾಗವಹಿಸಿದ್ದರು.



ಜೆಎಸ್‌ಎಸ್ ಅಂತರಸಂಸ್ಥೆಗಳ 17 ನೇ ಕ್ರೀಡಾಕೂಟದಲ್ಲಿ ಸುತ್ತೂರು ಶಾಲೆಗೆ ಸಮಗ್ರ ಪ್ರಶಸ್ತಿ ಲಭಿಸಿತು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ 32 ಪ್ರೌಢಶಾಲೆಗಳಿಂದ ಸುಮಾರು 400 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಚಿತ್ರಕಲಾ ಸ್ಪರ್ಧೆಯಲ್ಲಿ ನೂರಾರು ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಬಣ್ಣದ ಮೂಲಕ ಅಭಿವ್ಯಕ್ತಿ ಮಾಡಿದರು.

**27.1.2009**

ಜಾತ್ರಾ ಮಹೋತ್ಸವದ ಅಂತಿಮ ದಿನ. ತೆರೆ ಬೀಳುವ ಸಮಯ. ಅಂದು ಬೆಳಗ್ಗೆ ವಸ್ತುಪ್ರದರ್ಶನ, ಕೃಷಿ ಮೇಳ ಹಾಗೂ ಸಾಂಸ್ಕೃತಿಕ ಮೇಳಗಳ ಸಮಾರೋಪ ಸಮಾರಂಭ. ಕೂಡಲಿ ಶೃಂಗೇರಿ ಪೀಠಾಧ್ಯಕ್ಷರಾದ ಡಾ. ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳ ಸಮ್ಮುಖ. ಭಾಜಪ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಾಜನಾಥಸಿಂಗ್ ಅವರು ಸಮಾರೋಪ ಭಾಷಣ ಮಾಡಿದರು. ಸಂಸದ ಶ್ರೀ ಅನಂತಕುಮಾರ್, ಸಚಿವರಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಶ್ರೀ ಪಿ. ವೆಂಕಟರಮಣಪ್ಪನವರು ವಿವಿಧ ಮೇಳಗಳಲ್ಲಿ ಗೆದ್ದವರಿಗೆ ಪ್ರಶಸ್ತಿ ವಿತರಿಸಿದರು. ರಾಜ್ಯಸಭಾ ಸದಸ್ಯರು ಮತ್ತು ಉದ್ಯಮಿಗಳಾದ ಶ್ರೀ ಆದಿಕೇಶವುಲು, ಶಾಸಕರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಮತ್ತು ಶ್ರೀಮತಿ ಸೀಮಾ ಮಸೂತಿ ಇವರುಗಳು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಸಂಜೆ, ಸುತ್ತೂರಿನ ಜನತೆಯನ್ನು ಒಂದು ವಾರ ಕಾಲ ಬೆರಗಿನಲ್ಲಿ ಅದ್ದಿದ 'ಕರ್ನಾಟಕ ವೈಭವ' ಬೃಹತ್ ಧ್ವನಿ-ಬೆಳಕು ಕಾರ್ಯಕ್ರಮವು, ಬಿಜಾಪುರ ಶ್ರೀ ಜ್ಞಾನಯೋಗಾಶ್ರಮದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳ ಸಮ್ಮುಖದಲ್ಲಿ ಸಮಾರೋಪಗೊಂಡಿತು. ಮಾಜಿ ಕೇಂದ್ರ ಸಚಿವ ಶ್ರೀ ವಿ. ಶ್ರೀನಿವಾಸ ಪ್ರಸಾದ್‌ರವರು ಸಮಾರೋಪ ಭಾಷಣ ಮಾಡಿದರು. ಶ್ರೀ ತನ್ವೀರ್ ಸೇಠ್, ಶ್ರೀ ಮರಿತಿಬ್ಬೇಗೌಡ, ಶ್ರೀ ಚಿಕ್ಕಮಾದು ಮುಂತಾದ ಶಾಸಕರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

# ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಯೋಜನೆಯಡಿಯಲ್ಲಿ ದೂರದರ್ಶಕಗಳ ವಿತರಣೆ ಹಾಗೂ ಎರಡು ದಿನಗಳ ಕಾರ್ಯಾಗಾರ

ಜೆಎಸ್‌ಎಸ್ ವಿದ್ಯಾಪೀಠದ ಅಂಗಸಂಸ್ಥೆಯಾದ ಜೆಎಸ್‌ಎಸ್ ವಿಜ್ಞಾನ ಮತ್ತು ಸಮಾಜ ಪ್ರತಿಷ್ಠಾನವು ಶಿಕ್ಷಣ ಕ್ಷೇತ್ರದಲ್ಲಿ ಉತ್ಕೃಷ್ಟತೆಯ ಸಾಧನೆಗೆ ಶಿಕ್ಷಕರನ್ನು ಸಜ್ಜುಗೊಳಿಸಲು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಮಾಜದ, ಅದರಲ್ಲೂ ಗ್ರಾಮೀಣ ಜನತೆಯ, ಸರ್ವತೋಮುಖ ಅಭಿವೃದ್ಧಿಗೆ ಬಳಸುವಲ್ಲಿ ನೆರವಾಗಲು ಹಲವು ವಿಶಿಷ್ಟ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ದಿಕ್ಕಿನಲ್ಲಿ ಪ್ರತಿಷ್ಠಾನವು ಭಾರತ ಸರ್ಕಾರದಿಂದ ಪ್ರಾಯೋಜಿತವಾದ ಕೆಲವು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ರಾಷ್ಟ್ರೀಯ ಮಂಡಳಿಯಿಂದ (National Council for Science & Technology Communication) ಯಿಂದ ಪ್ರಾಯೋಜಿತ ವಾದ "ದೂರದರ್ಶಕಗಳ ತಯಾರಿಕೆ, ಖಗೋಳ ವಿಜ್ಞಾನ ಮತ್ತು ಭೌತವಿಜ್ಞಾನ ಶಿಕ್ಷಣಕ್ಕೆ ಸಜ್ಜು" ಎಂಬ ಯೋಜನೆ ಪ್ರಮುಖ ವಾದುದು. ಈ ಯೋಜನೆಯಡಿಯಲ್ಲಿ ಹತ್ತು ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಿಗೆ ಉತ್ತಮ ದರ್ಜೆಯ ದೂರದರ್ಶಕ ಗಳನ್ನು ನೀಡಿ, ಅವುಗಳ ಮೂಲಕ ಖಗೋಳ ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿ ಕರಿಗೆ ಹೆಚ್ಚಿನ ಅರಿವನ್ನುಂಟು ಮಾಡಲು ವಿಜ್ಞಾನ ಶಿಕ್ಷಕರಿಗೆ ತರಬೇತಿ ಕೊಡಲಾಗುವುದು. ಇದಕ್ಕೆ ನೆರವಾಗುವ ಸೂಕ್ತ ಕೈಪಿಡಿಗಳನ್ನು ಮತ್ತು ಕಿರುಹೊತ್ತಿಗೆಗಳನ್ನು ತಜ್ಞರಿಂದ ರೂಪಿಸಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನೀಡಲಾಗುವುದು. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಕುತೂಹಲ ಹೆಚ್ಚಿಸಲು ಮತ್ತು ಸಾರ್ವಜನಿಕರಿಗೆ ವಿಜ್ಞಾನದ ಮಹತ್ವವನ್ನು ತಿಳಿಸಲು ಈ ಯೋಜನೆ ಉಪಯುಕ್ತವಾಗಿದೆ.

ಇದರ ಅಂಗವಾಗಿ ಪ್ರತಿಷ್ಠಾನವು 22.11.2008 ರಂದು ದೂರದರ್ಶಕಗಳ ವಿತರಣೆ ಹಾಗೂ ಎರಡು ದಿನಗಳ ಕಾರ್ಯಾಗಾರದ ಉದ್ಘಾಟನಾ ಸಮಾರಂಭವನ್ನು ಸುತ್ತೂರಿನಲ್ಲಿ, ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ, ಏರ್ಪಡಿಸಿತ್ತು. ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ರಾಷ್ಟ್ರೀಯ ಮಂಡಳಿಯ ಮುಖ್ಯಸ್ಥರಾದ ಶ್ರೀ ಅನೂಜ್ ಸಿನ್ಹರವರು ಏಳು ಜಿಲ್ಲೆಗಳಿಂದ ಆಯ್ದ ಹತ್ತು ಪ್ರೌಢಶಾಲೆಗಳಿಗೆ ಹತ್ತು ದೂರದರ್ಶಕಗಳನ್ನು ವಿತರಿಸಿದರು. ಈ ದೂರದರ್ಶಕಗಳನ್ನು ಸಮರ್ಪಕವಾಗಿ ಬಳಸಿ ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಖಗೋಳವಿಜ್ಞಾನದ ಬಗೆಗಿನ ತಿಳುವಳಿಕೆಯನ್ನು ಹೆಚ್ಚಿಸಬೇಕೆಂದು ಹಾಗೂ ವೈಜ್ಞಾನಿಕ ಮನೋಭಾವನೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕೆಂದು ಶಿಕ್ಷಕರಿಗೆ ಕರೆ ನೀಡಿದರು.

ಇದರ ಅಂಗವಾಗಿ ನಡೆದ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಂ.ಐ. ಸವದತ್ತಿಯವರು ಉದ್ಘಾಟಿಸಿದರು. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಕೆಎಸ್‌ಸಿಎಸ್‌ಟಿ ಘಟಕದ ಕಾರ್ಯದರ್ಶಿಗಳಾದ ಪ್ರೊ. ಎಂ.ಕೆ. ಸೂರಪ್ಪನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಸುಮಾರು 60 ವಿಜ್ಞಾನ ಶಿಕ್ಷಕರಿಗೆ ಖಗೋಳವಿಜ್ಞಾನದ ಮೂಲ ಪರಿಕಲ್ಪನೆಗಳು ಹಾಗೂ ದೂರದರ್ಶಕ ಗಳನ್ನು ಸಮರ್ಪಕವಾಗಿ ಬಳಸುವ ಕೌಶಲಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪರಿಣತರ ಉಪನ್ಯಾಸಗಳ ಮೂಲಕ ಒದಗಿಸಲಾಯಿತು. ಸಂಜೆಯ ವೇಳೆಯಲ್ಲಿ ದೂರದರ್ಶಕಗಳನ್ನು ಬಳಸುವ ಮತ್ತು ಆಕಾಶಕಾಯಗಳ ವೀಕ್ಷಣೆ ಹಾಗೂ ಅಧ್ಯಯನಗಳ ಬಗ್ಗೆ ಅವರುಗಳಿಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು. □

---

æè]àÔè DàT|:

11.3.2009 ಬುಧವಾರ ಸಂಜೆ 6.00

:0èA0 ; (: PO"-PEY

**ಲಯವಿದ್ಯಾ ಪ್ರತಿಷ್ಠಾನ ತಂಡ**
ಮೈಸೂರು

ಸ್ಥಳ : ಶ್ರೀ ಸುತ್ತೂರು ಮಠ
(ಮೈಸೂರು ಶಾಖೆ), ಮೈಸೂರು

# ಜೆಎಸ್ಎಸ್ ಮಹಿಳಾ ಕಾಲೇಜು, ಎಚ್ಎಸ್ಆರ್ ಬಡಾವಣೆ, ಬೆಂಗಳೂರು



ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಸಂಭ್ರಮವನ್ನು ನವೆಂಬರ್ 17 ಮತ್ತು 18 ರಂದು ಕಾಲೇಜಿನಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಮೊದಲನೆಯ ದಿನ ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಒತ್ತು ಕೊಡುವ ಅಂತರ ಕಾಲೇಜು ಕನ್ನಡ ರಾಜ್ಯೋತ್ಸವ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಹದಿನಾಲ್ಕು ಕಾಲೇಜುಗಳಿಂದ ಇನ್ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಈ ಸ್ಪರ್ಧೆಗಳಲ್ಲಿ (ವೃಂದಗಾನ, ರಸಪ್ರಶ್ನೆ ಮತ್ತು ಚರ್ಚಾಸ್ಪರ್ಧೆ) ಭಾಗವಹಿಸಿದರು.

ಮಾರನೆಯ ದಿನ ಜಯನಗರದ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ರಾಜ್ಯೋತ್ಸವದ ಮುಖ್ಯ ಸಮಾರಂಭ ನಡೆಯಿತು. ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ಶಿಶು ಹೃದ್ರೋಗ ತಜ್ಞೆ ಮತ್ತು ಲೇಖಕಿ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಯವರನ್ನು ಕಾಲೇಜಿನ ಪ್ರಿನ್ಸಿಪಾಲರಾದ ಕೆ. ಎಂ. ಇಂದಿರಾ ಅವರು ಅಭಿನಂದಿಸಿ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕು. ದೀನಾ ರವರು ಅಭಿನಂದನ ಭಾಷಣ ಮಾಡಿದ್ದು ವಿಶೇಷವಾಗಿತ್ತು.

ಕನ್ನಡ ಭಾಷೆಯ ಸತ್ವ, ಶಕ್ತಿಯನ್ನು ಸಾರುವ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 37 ಪಿಎಚ್.ಡಿ. ನಿಬಂಧಗಳ ಸಂಪುಟಗಳನ್ನು ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಮ.ಗಂ. ರೇಣುಕ ಪ್ರಸನ್ನರವರು ಕಾಲೇಜಿಗೆ ಕೊಡುಗೆಯಾಗಿ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ. ವೀರಣ್ಣನವರು, ಸ್ತ್ರೀಭ್ರೂಣಹತ್ಯೆಯ ಬಗೆಗೆ ತೀವ್ರ ಕಳವಳ ವ್ಯಕ್ತಪಡಿಸಿ, ಹೆಣ್ಣಿಗೆ ಹುಟ್ಟಲೂ ಹಕ್ಕಿಲ್ಲವೆ ಎಂದು ಪ್ರಶ್ನಿಸಿದರು. ಮುಂದುವರಿದು, ಅವರು ಇಂದು ಕನ್ನಡದಲ್ಲಿ ಸೃಜನಶೀಲ ಸಾಹಿತ್ಯಕ್ಕಿಂತ ವಿಷಯ ಸಾಹಿತ್ಯ ಬೆಳೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಅಂತರ ಕಾಲೇಜು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸಮಾರಂಭದಲ್ಲಿ ನಗದು ಬಹುಮಾನಗಳನ್ನು (ಪ್ರಥಮ: 1000 ರೂ.; ದ್ವಿತೀಯ: 700 ರೂ.; ತೃತೀಯ: 500 ರೂ.) ನೀಡಲಾಯಿತು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಗೊ.ರು. ಚನ್ನಬಸಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ದಾನಿ ದಿಬ್ಬೂರು ಸಿದ್ದಲಿಂಗಪ್ಪನವರು, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಆರ್. ಉಷಾ ಉಪಸ್ಥಿತರಿದ್ದರು.

ಇತಿಹಾಸದ ಅಧ್ಯಾಪಕರಾದ ಶ್ರೀ ಎಸ್.ಆರ್. ಸುರೇಂದ್ರರವರು ಬಹುಮಾನಿತ ವಿದ್ಯಾರ್ಥಿನಿಯರನ್ನು ಪರಿಚಯಿಸಿದರು. ಕನ್ನಡ ಉಪನ್ಯಾಸಕರಾದ ಶ್ರೀ ಹೊನ್ನಶೆಟ್ಟಿಯವರು ಕಾರ್ಯಕ್ರಮ ನಿರೂಪಿಸಿದರು. ಕನ್ನಡ ಉಪನ್ಯಾಸಕಿ ಶ್ರೀಮತಿ ಸಿ. ಶೋಭರವರು ವಂದನೆ ಸಲ್ಲಿಸಿದರು.

**ಸ್ಪರ್ಧೆಗಳಲ್ಲಿ ವಿಜೇತರಾದವರು**

**ವೃಂದಗಾನ :**

1. ಅನನ್ಯ ಎಸ್. ವಶಿಷ್ಠ ಮತ್ತು ತಂಡ
   ಜ್ಯೋತಿ ಕೇಂದ್ರೀಯ ವಿದ್ಯಾಲಯ — ಪ್ರಥಮ
2. ಹಿಲ್ಡಾ ನವ್ಯಾ ಮತ್ತು ತಂಡ
   ಕ್ರೈಸ್ಟ್‌ದ ಕಿಂಗ್ ಪ.ಪೂ. ಕಾಲೇಜು — ದ್ವಿತೀಯ
   ಕಗ್ಗಲೀಪುರ
3. ಗೀತಾ ಮತ್ತು ತಂಡ
   ಲಯೋಲ ಸಂ. ಪಂ.ಪೂ. ಕಾಲೇಜು — ತೃತೀಯ

**ರಸಪ್ರಶ್ನೆ :**

1. ನೇಹಾ ಎ. ಮತ್ತು ಶ್ರುತಿ ಎಚ್.ಎಸ್.
   ಜ್ಯೋತಿ ಕೇಂದ್ರೀಯ ವಿದ್ಯಾಲಯ — ಪ್ರಥಮ
2. ಪ್ರೀತಿ ಎಸ್. ಮತ್ತು ತಂಡ
   ನ್ಯೂ ವಾಣಿವಿಲಾಸ ಕಾಲೇಜು — ದ್ವಿತೀಯ
3. ಶಾಲಿನಿ ಪಿ. ಮತ್ತು ತಂಡ
   ಶ್ರೀ ಸಿದ್ಧಗಂಗಾ ಕಾಲೇಜು, ರಘುವನಹಳ್ಳಿ — ತೃತೀಯ

**ಚರ್ಚಾಸ್ಪರ್ಧೆ :**

1. ಸಿ. ದಿವ್ಯ
   ಜೆಎಸ್‌ಎಸ್ ಪದವಿಪೂರ್ವ ಕಾಲೇಜು — ಪ್ರಥಮ
2. ಜಯಶ್ರೀ
   ಶ್ರೀ ಸಿದ್ಧಗಂಗಾ ಪದವಿಪೂರ್ವ ಕಾಲೇಜು
   ರಘುವನಹಳ್ಳಿ — ದ್ವಿತೀಯ
3. ನಂದಿನಿ
   ಸರ್ಕಾರಿ ಪದವಿಪೂರ್ವ ಕಾಲೇಜು, ಮಡಿವಾಳ — ತೃತೀಯ

---

**ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ**

ಕಾಲೇಜಿನಲ್ಲಿ ದಿನಾಂಕ 15.12.2008 ರಂದು "ಅಲ್ಪಾವಧಿ ಬೇಸಿಕ್ ಕಂಪ್ಯೂಟರ್ ಕೋರ್ಸ್"ನ ಉದ್ಘಾಟನಾ ಸಮಾರಂಭ ನೆರವೇರಿತು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ.ಜಿ. ಪರಮಶಿವಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಲೀಂ ಮಿಶ್ರ ರವರು ಉದ್ಘಾಟನೆ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಗುಂಡ್ಲುಪೇಟೆ ಶಾಖೆಯ ಮ್ಯಾನೇಜರ್ ಶ್ರೀ ಗಿರಿಧರ್‌ರವರು ಮತ್ತು ಅಸಿಸ್ಟೆಂಟ್ ಮ್ಯಾನೇಜರ್ ಶ್ರೀ ಕುಮಾರಸ್ವಾಮಿಯವರು ಹಾಜರಿದ್ದರು. ಹಿರಿಯ ಪ್ರಾಧ್ಯಾಪಕರುಗಳಾದ ಶ್ರೀ ಮಹದೇವಪ್ಪನವರು, ಶ್ರೀ ಎಸ್. ಲಿಂಗಣ್ಣನವರು, ಶ್ರೀ ರೇವಣ್ಣನವರು, ಶ್ರೀ ಬಸವರಾಜಪ್ಪನವರು, ಶ್ರೀ ಎನ್. ಶಿವಕುಮಾರ್‌ರವರು ಮತ್ತು ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಅಲ್ಪಾವಧಿ ಬೇಸಿಕ್ ಕಂಪ್ಯೂಟರ್ ಕೋರ್ಸ್‌ಗೆ 45 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ.

**ಜೆಎಸ್‌ಎಸ್ ಸಹನಾ ಸಮನ್ವಯ ಶಿಕ್ಷಣ ಶಾಲೆ ಸರಸ್ವತಿಪುರಂ, ಮೈಸೂರು**

ಮೈಸೂರು ನಗರದ ಜಗನ್ಮೋಹನ ಅರಮನೆಯಲ್ಲಿ ರೋಟರಿ ಸಂಸ್ಥೆ ಮತ್ತು ಇನ್ನರ್ ವ್ಹೀಲ್ ಸಂಸ್ಥೆಗಳ ಸಹಯೋಗದಲ್ಲಿ ದಿನಾಂಕ 20.12.2008 ರಂದು ನಡೆದ ವಿಶೇಷ ಕಾಳಜಿಯ ಮಕ್ಕಳಿಗಾಗಿ ಏರ್ಪಡಿಸಿದ್ದ "ತಾರೆ ಜಮೀನ್ ಪರ್" ಸಾಂಸ್ಕೃತಿಕ ಮೇಳದಲ್ಲಿ ಶಾಲೆಯ ಮಕ್ಕಳು ಭಾಗವಹಿಸಿ ಕೆಳಕಂಡ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನಗಳನ್ನು ಪಡೆದಿರುತ್ತಾರೆ.

1. ಗಂಡುಮಕ್ಕಳ ಸಾಮೂಹಿಕ ನೃತ್ಯ
2. ಹೆಣ್ಣುಮಕ್ಕಳ ಸಾಮೂಹಿಕ ನೃತ್ಯ
3. ಛದ್ಮ ವೇಷ ಸ್ಪರ್ಧೆ
4. ಚಿತ್ರಗೀತೆ ಸ್ಪರ್ಧೆ

ಒಟ್ಟಾರೆ, ಉತ್ತಮ ಸಾಧನೆಗಾಗಿ ನೀಡುವ ಪಾರಿತೋಷಕ ಹಾಗೂ 2,000 ರೂ.ಗಳ ನಗದು ಬಹುಮಾನವನ್ನು ಪಡೆಯುವುದರ ಮೂಲಕ ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು.

## ಜೆಎಸ್‌ಎಸ್ ಔಷಧವಿಜ್ಞಾನ ಮಹಾವಿದ್ಯಾಲಯ, ಮೈಸೂರು

ಇಂಡಿಯನ್ ಫಾರ್ಮಸಿ ಕೌನ್ಸಿಲ್‌ನ ಮೈಸೂರು ಶಾಖೆ ಮತ್ತು ಐ.ಪಿ.ಎ. ವಿದ್ಯಾರ್ಥಿಕೂಟದ ಸಹಯೋಗದೊಂದಿಗೆ ಕಾಲೇಜಿನಲ್ಲಿ ರಾಷ್ಟ್ರೀಯ ಔಷಧ ಸಪ್ತಾಹವನ್ನು ನವೆಂಬರ್ 21ರಿಂದ 27 ರವರೆಗೆ ಆಚರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್.ಜಿ. ಶಿವಕುಮಾರ್‌ರವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ. ಸುರೇಶ್‌ರವರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ ಔಷಧವಿಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಮನ್ನಣೆಯನ್ನು ದೊರಕಿಸಿಕೊಡಲು ತಾವು ಶಕ್ತಿಮೀರಿ ಶ್ರಮಿಸುವುದಾಗಿ ತಿಳಿಸಿದರು. ಅನಂತರ ಸಪ್ತಾಹದ ಉದ್ದೇಶದ ಬಗ್ಗೆ ಮಾತನಾಡಿದ ಕೃಷ್ಣರಾಜ ಆಸ್ಪತ್ರೆಯ ಮುಖ್ಯ ಔಷಧ ತಜ್ಞರಾದ ಶ್ರೀ ಎಸ್.ಎಸ್. ದೇಶಪಾಂಡೆಯವರು ಸಮುದಾಯದ ಆರೋಗ್ಯರಕ್ಷಣೆಯಲ್ಲಿ ಔಷಧತಜ್ಞರ ಪಾತ್ರವನ್ನು ಕುರಿತು ಮಾತನಾಡಿದರು. ಸುಪ್ರೀಂ ಫಾರ್ಮಸೂಟಿಕಲ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಎನ್. ರಾವ್‌ರವರು ಭಾರತೀಯ ಔಷಧ ಕಂಪನಿಗಳ ಯಶೋಗಾಥೆಯನ್ನು ಸವಿಸ್ತಾರವಾಗಿ ಅಂಕಿಅಂಶಗಳ ಸಹಿತ ವಿವರಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆಗಳ ನಿರ್ದೇಶಕರಾದ ಡಾ. ಎಂ.ಎಸ್. ಅನಂತರಾಜುರವರು ತಮ್ಮ ಭಾಷಣದಲ್ಲಿ ಎಲ್ಲಾ ಚಿಕಿತ್ಸಾಲಯಗಳೂ ಹೆಚ್ಚು ಲಾಭಾಪೇಕ್ಷೆ ಇಟ್ಟುಕೊಳ್ಳದೆ ಸಮಾಜದ ಆರೋಗ್ಯರಕ್ಷಣೆಗೆ ಶ್ರಮಿಸಬೇಕೆಂದು ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಔಷಧ ಸಪ್ತಾಹದ ಅಂಗವಾಗಿ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ, ಚಾಮುಂಡಿಬೆಟ್ಟದ ಚಾರಣ, ವಿದ್ಯಾರ್ಥಿಗಳಿಗೆ ಚಿತ್ರಕಲೆ, ಚರ್ಚಾಸ್ಪರ್ಧೆ, ಕ್ಷಯರೋಗ ನಿರ್ಮೂಲನಾ ಶಿಬಿರವನ್ನು ಆಯೋಜಿಸಲಾಗಿತ್ತು. ಜೊತೆಗೆ, ಬೀದಿ ನಾಟಕ ಹಾಗೂ ಸಾಕ್ಷ್ಯಚಿತ್ರಗಳ ಮೂಲಕ ಕ್ಷಯರೋಗದ ಬಗ್ಗೆ ಜನರಿಗೆ ವ್ಯಾಪಕವಾದ ತಿಳುವಳಿಕೆಯನ್ನು ನೀಡಲಾಯಿತು.

ದಿನಾಂಕ 26.11.2008 ರಂದು ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ವಿದ್ಯಾರ್ಥಿಗಳಿಂದ 111 ಯೂನಿಟ್ ರಕ್ತವನ್ನು ಸಂಗ್ರಹಿಸಿ ಜೆಎಸ್‌ಎಸ್ ಆಸ್ಪತ್ರೆಯ ರಕ್ತನಿಧಿ ವಿಭಾಗಕ್ಕೆ ಅರ್ಪಿಸಲಾಯಿತು.

ಸಪ್ತಾಹದ ಮುಕ್ತಾಯ ಸಮಾರಂಭವನ್ನು ದಿನಾಂಕ 27.11.2008 ರಂದು ನಡೆಸಲಾಯಿತು. ಐ.ಪಿ.ಎ. ಮೈಸೂರು ಶಾಖೆಯ ಕಾರ್ಯದರ್ಶಿಗಳಾದ ಡಾ. ಟಿ.ಎಂ. ಪ್ರಮೋದ್‌ಕುಮಾರ್‌ರವರು ಸಪ್ತಾಹದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳ ವರದಿಯನ್ನು ವಾಚಿಸಿದರು. ಊಟಿಯ ಜೆಎಸ್‌ಎಸ್ ಔಷಧವಿಜ್ಞಾನ ವಿದ್ಯಾಲಯದ ಪ್ರಾಂಶುಪಾಲರಾದ ಡಾ. ಕೆ. ಇಳಂಗೋ ಹಾಗೂ ಮೈಸೂರು ಜಿಲ್ಲೆಯ ಔಷಧ ನಿಯಂತ್ರಕರಾದ ಶ್ರೀ ವಿ.ಎಲ್. ಹಂಬರ್‌ರವರು ಮುಖ್ಯ ಅತಿಥಿಗಳಾಗಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ. ಮೃತ್ಯುಂಜಯ ಪಿ. ಕುಳೇನೂರ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

---

### ಜೆಎಸ್‌ಎಸ್ ಪಬ್ಲಿಕ್ ಶಾಲೆ, ಜೆ.ಪಿ.ನಗರ, ಮೈಸೂರು

ಶಾಲೆಯಲ್ಲಿ 10.12.2008 ರಂದು ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು. ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎ. ರಾಮದಾಸ್‌ರವರು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪನಿರ್ದೇಶಕರಾದ ಶ್ರೀ ರಾಜೇಂದ್ರ ಪ್ರಸಾದ್ ಹಾಗೂ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಸಹಾಯಕ ಪ್ರಬಂಧಕರಾದ ಶ್ರೀಮತಿ ಭಾರತಿಯವರು ಉಪಸ್ಥಿತರಿದ್ದರು.

ಮಕ್ಕಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶಾಲಾ ನಾಯಕಿ ಕುಮಾರಿ ಭಾರ್ಗವಿ ಸುಬ್ರಹ್ಮಣ್ಯ ಗಣ್ಯರನ್ನು ಸ್ವಾಗತಿಸಿದರು. ವಾರ್ಷಿಕ ವರದಿಯನ್ನು ಪ್ರಾಂಶುಪಾಲರಾದ ಶ್ರೀ ಎಸ್. ಪರಮೇಶ್ವರಪ್ಪನವರು ಮಂಡಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ವರದಿಯನ್ನು ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖ್ಯಸ್ಥರಾದ ಶ್ರೀಮತಿ ಶಶಿಕಲಾ ಜೆ. ಶಾನ್‌ಭಾಗ್‌ರವರು ವಾಚಿಸಿದರು. ಮುಖ್ಯ ಅತಿಥಿಗಳು "ಪ್ರತಿಭಾವಂತ ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ಉತ್ತಮ ನಾಗರಿಕರಾಗಬೇಕು" ಎಂದು ಕರೆ ನೀಡಿದರು.

ಇಂಡಿಯನ್ ಓವರ್‌ಸೀಸ್ ಬ್ಯಾಂಕಿನವರು ಕೊಡಮಾಡಿದ 10,000 ರೂ.ಗಳನ್ನು ಕಳೆದ ವರ್ಷ ಎಲ್ಲ ತರಗತಿಯಲ್ಲೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ (ಎಲ್.ಕೆ.ಜಿ. ಯಿಂದ 10ನೇ ತರಗತಿಯ ವರೆಗೆ) ಬ್ಯಾಂಕಿನ ಅಧಿಕಾರಿಗಳಾದ ಶ್ರೀಮತಿ ಭಾರತಿಯವರು ವಿತರಿಸಿದರು. □

# 'ಮಾಹಿತಿ ಸೌಲಭ್ಯ ಯೋಜನೆ'ಗೆ ಚಾಲನೆ

ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳಲ್ಲಿ ವಿಜ್ಞಾನ ಮತ್ತು ಗಣಿತ ಶಿಕ್ಷಣದ ಕಲಿಕೆ ಹಾಗೂ ಬೋಧನೆಯ ಗುಣಮಟ್ಟವನ್ನು ಹೆಚ್ಚಿಸುವ ಮಹತ್ವಾಕಾಂಕ್ಷೆಯ 'ಮಾಹಿತಿ ಸೌಲಭ್ಯ ಯೋಜನೆ'ಗೆ ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಡಾ. ಆರ್. ಚಿದಂಬರಂ ಮಂಗಳವಾರ ಬೆಂಗಳೂರಿನಲ್ಲಿ 16.12.2008 ರಂದು ಚಾಲನೆ ನೀಡಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಬೆಂಗಳೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ಸಮಾಜ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಾಯೋಗಿಕವಾಗಿ ಇದನ್ನು ಪೈಲಟ್ ಯೋಜನೆಯಾಗಿ ಜಾರಿಗೊಳಿಸಲಾಗಿದೆ. ಇದು ಯಶಸ್ವಿಯಾದರೆ ಮಾನವ ಸಂಪನ್ಮೂಲ ಇಲಾಖೆಯು ಇದನ್ನು ರಾಜ್ಯಾದ್ಯಂತ ವಿಸ್ತರಿಸುವ ಸಾಧ್ಯತೆ ಇದೆ ಎಂದರು.

"ಮುಂದಿನ ಹತ್ತು ವರ್ಷಗಳಲ್ಲಿ ಭಾರತ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಸ್ಪರ್ಧೆಯನ್ನು ಎದುರಿಸಬೇಕಾಗುತ್ತದೆ. ಲಿಂಗ ತಾರತಮ್ಯವಿಲ್ಲದೆ ಶೇ.100 ರಷ್ಟು ಸಾಕ್ಷರತೆ ಸಾಧಿಸಬೇಕಾಗಿದೆ. ಸಾಮಾಜಿಕ ಅಸಮಾನತೆಯನ್ನು ತೊಡೆಯುವ ಪ್ರಮುಖ ಅಸ್ತ್ರವಾಗಿ ಶಿಕ್ಷಣದ ಸದ್ಬಳಕೆಯಾಗಬೇಕು" ಎಂದು ಅವರು ಕರೆ ನೀಡಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಶ್ರೀಗಳವರು ಮಾತನಾಡಿ "ಜಗತ್ತು ಬದಲಾಗುತ್ತ ಹೋದಂತೆ ನಾವೂ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಈ ಯೋಜನೆಯನ್ನು ಜೆಎಸ್‌ಎಸ್ ಸಂಸ್ಥೆಗೆ ಮಂಜೂರು ಮಾಡಿರುವುದರಿಂದ ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ" ಎಂದು ಅಭಿಪ್ರಾಯಪಟ್ಟರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ಜಿ. ಕುಮಾರ ನಾಯಕ್‌ರವರು ಮಾತನಾಡಿ, "ಇದೊಂದು ವಿನೂತನ ಯೋಜನೆಯಾಗಿದ್ದು, ಇದು ಯಶಸ್ವಿಯಾದರೆ ಇಲಾಖೆಯು ಇದನ್ನು ರಾಜ್ಯಾದ್ಯಂತ ಜಾರಿಗೆ ತರಲಿದೆ. ಹಾಗಾಗಿ ಇದರ ಫಲಿತಾಂಶವನ್ನು ಕುತೂಹಲದಿಂದ ಗಮನಿಸಲಾಗುತ್ತಿದೆ" ಎಂದರು.

ವಿಶ್ರಾಂತ ಕುಲಪತಿ ಪ್ರೊ. ಎಂ.ಐ. ಸವದತ್ತಿ, ನಿವೃತ್ತ ಮುಖ್ಯ ಕಾರ್ಯದರ್ಶಿ, ಶ್ರೀ ಎಸ್.ಬಿ. ಮುದ್ದಪ್ಪ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್‌ರವರು ಈ ಸಂದರ್ಭದಲ್ಲಿ ಮಾತನಾಡಿ ಯೋಜನೆಯ ಯಶಸ್ಸಿಗೆ ಶುಭ ಹಾರೈಸಿದರು. ವಿಶ್ರಾಂತ ಕುಲಪತಿ ಪ್ರೊ. ಕೆ. ಸಿದ್ದಪ್ಪನವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪ್ರೌಢಶಾಲಾ ಪಠ್ಯವಿಷಯಗಳ ಬಗ್ಗೆ ವಿಸ್ತೃತವಾದ ಮಾಹಿತಿ ಸಂಪನ್ಮೂಲವನ್ನು ಬಹುಮಾಧ್ಯಮ ತಂತ್ರಗಳನ್ನು ಬಳಸಿ ಸಿದ್ಧಪಡಿಸುವುದು. ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲ ರೀತಿಯ ಮಾಹಿತಿಗಳು ಲಭ್ಯವಿರುವಂಥ ಸುಸಜ್ಜಿತವಾದ ಕೇಂದ್ರವನ್ನು ಸ್ಥಾಪಿಸಿ, ಆ ಕೇಂದ್ರದೊಡನೆ ನಿರಂತರ ಸಂಪರ್ಕ ಇಟ್ಟುಕೊಳ್ಳಲು ಅನುವಾಗುವಂತೆ ಗ್ರಾಮೀಣ ಶಾಲೆಗಳಿಗೆ ಅಂತರ್ಜಾಲ, ಕಂಪ್ಯೂಟರ್ ಸೌಲಭ್ಯ ಇತ್ಯಾದಿಗಳನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಮೊದಲನೆಯ ಹಂತದಲ್ಲಿ ಮಾಹಿತಿ ಕೇಂದ್ರವನ್ನು ಮೈಸೂರಿನಲ್ಲಿ ಸ್ಥಾಪಿಸಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಆಯ್ದ ಪ್ರೌಢಶಾಲೆಗಳಿಗೆ ಅಂತರ್ಜಾಲದ ವ್ಯವಸ್ಥೆ ಮೂಲಕ ಸಂಪರ್ಕ ಕಲ್ಪಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಬೇರೆ ಜಿಲ್ಲೆಗಳ ಪ್ರೌಢಶಾಲೆಗಳಿಗೂ ಇದನ್ನು ವಿಸ್ತರಿಸಲಾಗುತ್ತದೆ.

### ಶಿವಾನುಭವ ದಾಸೋಹ ಪ್ರವಚನ

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ದಿನಾಂಕ 27.12.2008 ಶನಿವಾರ ಸಂಜೆ 6 ಗಂಟೆಗೆ ಜೆಎಸ್‌ಎಸ್ ನಗರ ಮತ್ತು ಶಕ್ತಿನಗರದ ಶ್ರೀ ಶಕ್ತಿ ಗಣಪತಿ ದೇವಸ್ಥಾನದಲ್ಲಿ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀ ಮಲೆಯೂರು ಗುರುಸ್ವಾಮಿ ಅವರಿಂದ ಶಿವಾನುಭವ ದಾಸೋಹ-134 ಉಪನ್ಯಾಸ ಕಾರ್ಯಕ್ರಮದಲ್ಲಿ "ಶರಣ ಸಂಸ್ಕೃತಿ" ಎಂಬ ವಿಷಯವಾಗಿ ಪ್ರವಚನ ನೀಡಿದರು.

ಮೈಸೂರಿನ ಸಹಾಯಕ ಪೊಲೀಸ್ ಕಮೀಷನರ್ (ಸಂಚಾರ ವಿಭಾಗ) ಶ್ರೀ ಎನ್. ಹನುಮಂತಪ್ಪನವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

## ಸುತ್ತ ಮುತ್ತ

# ಜೆಎಸ್ಎಸ್ ಪ್ರೌಢಶಾಲೆ, ಸುತ್ತೂರು, ನಂಜನಗೂಡು ತಾಲ್ಲೂಕು



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ದಿನಾಂಕ 24.11.2008 ರಂದು ಕರ್ನಾಟಕ ಸರ್ಕಾರದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾಕೂಟದಲ್ಲಿ ಶಾಲೆಯ ಕ್ರೀಡಾಪಟುಗಳು ಭಾಗವಹಿಸಿದ್ದು ಸುನೀಲ್‌ಕುಮಾರ್ ನಾಯಕ, ಉದ್ದ ಜಿಗಿತ, 100 ಮೀ. 200 ಮೀ. 4×100 ಮೀ. ರಿಲೇ ಓಟಗಳಲ್ಲಿ ಪ್ರಥಮ ಸ್ಥಾನ ಪಡೆದು, ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ. ಶಿವಪ್ರಸಾದ್ ಎಸ್. ಬಡಿಗೇರ ಗುಂಡು ಎಸೆತ, ತಟ್ಟೆ ಎಸೆತ, 4×100 ರಿಲೇ ವಿಭಾಗದಲ್ಲಿ ಪ್ರಥಮ; ಗಣೇಶ್ ಎಂ. ಎತ್ತರ ಜಿಗಿತ 4×100 ಮೀ. ಪ್ರಥಮ; ದೊರೆಸ್ವಾಮಿ ಎಸ್. 400 ಮೀ ಓಟದಲ್ಲಿ ಪ್ರಥಮ; ದಿಲೀಪ್ ಕುಮಾರ್, ಕುಸ್ತಿ (40 ಕೆಜಿ) ಪ್ರಥಮ; ಪುನೀತ್, ಕುಸ್ತಿ (45 ಕೆಜಿ) ದ್ವಿತೀಯ; ಜೀವನ್ ಎಚ್.ಯು. 3000 ಮೀ. ಓಟ ಹಾಗೂ ತೇಜಸ್ 1500 ಮೀ. ಓಟಗಳಲ್ಲಿ ದ್ವಿತೀಯ ಸ್ಥಾನ.

ಮೇಲಿನ ಎಲ್ಲಾ ಕ್ರೀಡಾಪಟುಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ಇದಲ್ಲದೆ ಗುಂಪು ಆಟಗಳಾದ ಪುಟ್‌ಬಾಲ್, ವಾಲಿಬಾಲ್, ಹಾಕಿ, ಹಗ್ಗಜಗ್ಗಾಟ ಇವುಗಳಲ್ಲಿಯೂ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟದ ಸುತ್ತಿಗೆ ಆಯ್ಕೆಯಾಗಿದ್ದು, 2008-09ನೇ ಸಾಲಿನ ಅತಿ ಹೆಚ್ಚು ವೈಯಕ್ತಿಕ ಮತ್ತು ಗುಂಪು ಆಟಗಳಲ್ಲಿ ಪ್ರಥಮ ಸ್ಥಾನಗಳನ್ನು ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಎಲ್ಲ ಕ್ರೀಡಾಪಟುಗಳಿಗೂ ಮತ್ತು ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರಿಗೂ ಪ್ರಾಂಶುಪಾಲರು ಅಭಿನಂದನೆ ಸಲ್ಲಿಸಿದ್ದಾರೆ.

☐

# ಜೆಎಸ್‌ಎಸ್ ಪ್ರೌಢಶಾಲೆ, ಅರಕಲವಾಡಿ, ಚಾಮರಾಜನಗರ ತಾಲ್ಲೂಕು



ಶಾಲೆಯ ರಜತ ಮಹೋತ್ಸವದ ಅಂಗವಾಗಿ ದಿನಾಂಕ 17.12.2008ರಂದು ಅಂತರ ಪ್ರೌಢಶಾಲಾ ವಚನಗಾಯನ, ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಸಾನ್ನಿಧ್ಯವನ್ನು ಬೊಮ್ಮನಹಳ್ಳಿಯ ಪಟ್ಟದ ಮಠದ ಷ.ಬ್ರ. ಶ್ರೀ ಇಮ್ಮಡಿ ಶಾಂತಮಲ್ಲ ಸ್ವಾಮಿಗಳವರು ವಹಿಸಿದ್ದರು. ಶ್ರೀ ಬಿ. ಸಿದ್ಧಮಲ್ಲಯ್ಯನವರು, ಮಾಜಿ ಅಧ್ಯಕ್ಷರು ಮೈಸೂರು ಜಿಲ್ಲಾ ಹಾಲು ಒಕ್ಕೂಟ ಹಾಗೂ ಕಾರ್ಯಾಧ್ಯಕ್ಷರು, ರಜತ ಮಹೋತ್ಸವ ಸಮಿತಿ ಇವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಗೌಡಿಕೆ ಮಲ್ಲಪ್ಪನವರು, ಮಂಚುಗುಂಡಿಪುರ, ಶ್ರೀ ಎ.ಎಸ್. ಬಸವಣ್ಣನವರು, ಮಾಜಿ ಗ್ರಾಮಪಂಚಾಯಿತಿ ಅಧ್ಯಕ್ಷರು, ಅರಕಲವಾಡಿ, ಶ್ರೀ ಆರ್. ಕುಮಾರ್‌ರವರು, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಶ್ರೀ ರಾಮಯ್ಯ, ಮಾಜಿ ಗ್ರಾಮಪಂಚಾಯತ್ ಅಧ್ಯಕ್ಷರು, ಅರಕಲವಾಡಿ ಇವರುಗಳು ಸಭೆಗೆ ಆಗಮಿಸಿದ್ದರು. ಶಾಲೆಯ ಹಲವಾರು ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸಹ ಉಪಸ್ಥಿತರಿದ್ದರು.

ಮೇಲ್ಕಂಡ ಸ್ಪರ್ಧೆಗಳಿಗೆ ಸುತ್ತಮುತ್ತಲಿನ ಹತ್ತು ಪ್ರೌಢಶಾಲೆಗಳಿಂದ ತಲಾ ಆರು ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅಂದು ಮಧ್ಯಾಹ್ನ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ಸಿದ್ಧಮಲ್ಲಯ್ಯನವರು ವಹಿಸಿ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗೆ ಹಾಗೂ ಶಾಲೆಯ ಶಿಕ್ಷಕರಿಗೆ ನೆನಪಿನ ಕಾಣಿಕೆಗಳನ್ನು ವಿತರಿಸಿದರು.

***

ಶಾಲೆಯ ರಜತ ಮಹೋತ್ಸವ ಅಂಗವಾಗಿ ದಿನಾಂಕ 29.12.2008 ರಂದು ಶೈಕ್ಷಣಿಕ ವಸ್ತುಪ್ರದರ್ಶನ ಹಾಗೂ ಸಾಮೂಹಿಕ ನೃತ್ಯ ಸ್ಪರ್ಧೆ ಸಮಾರಂಭ ಏರ್ಪಾಡಾಗಿತ್ತು. ಸಮಾರಂಭವನ್ನು ಉದ್ಘಾಟಿಸಿದ ಚಾಮರಾಜನಗರ ದೀನಬಂಧು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಜಿ.ಎಸ್. ಜಯದೇವ್‌ರವರು ಮಾತನಾಡುತ್ತಾ "ಇಂದಿನ ವಿದ್ಯಾಭ್ಯಾಸವು ಮನುಷ್ಯನಿಗೆ ಚಾಲಾಕಿತನವನ್ನು ಕಲಿಸಿದೆಯೇ ಹೊರತು ವಿವೇಕವನ್ನು ಕಲಿಸಿಕೊಟ್ಟಿಲ್ಲ. ಚಾರಿತ್ರ್ಯ, ವಿವೇಕವನ್ನು ಕಲಿಸದ ವಿಜ್ಞಾನ, ತಂತ್ರಜ್ಞಾನಗಳಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ಮೌಲ್ಯಯುತ ವಿದ್ಯೆಯನ್ನು ಕಲಿಯದವರು ಸಮಾಜಕ್ಕೆ ಕಳಂಕಪ್ರಾಯರು" ಎಂದು ತಿಳಿಸಿದರು. "Education without character creates educated rascals" ಎಂದು ಅಭಿಪ್ರಾಯಟ್ಟರು. "ವಿಜ್ಞಾನ ತಂತ್ರಜ್ಞಾನ ಕಲಿತವರು ಅಣು ಬಾಂಬ್‌ಗಳನ್ನು ಕಂಡುಹಿಡಿದಿದ್ದಾರೆ. ಆದರೆ ಅವಿದ್ಯಾವಂತರು ದೇಶದ ಪ್ರಗತಿಗೆ ಪೂರಕವಾದ ಉತ್ಪಾದನೆಯಲ್ಲಿ ತೊಡಗಿದ್ದಾರೆ. ಅವರಿಂದ ಪ್ರಕೃತಿಗೆ ಹಾನಿ ಆಗುತ್ತಿರುವುದು ಕಡಿಮೆ. ಅವರು ಉತ್ಪಾದನೆಯಿಂದ ವಿಮುಖರಾದರೆ ಇಡೀ ಸಮಾಜ ಉಪವಾಸ ಬೀಳಬೇಕಾಗುತ್ತದೆ" ಎಂದು ಎಚ್ಚರಿಸಿದರು. ಚಾಮರಾಜನಗರ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷರಾದ ಶ್ರೀ ಕೆ.ಎಸ್. ನಾಗರಾಜಪ್ಪನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಎ.ವಿ. ಗುರುಮಲ್ಲಪ್ಪನವರು, ಅರಕಲವಾಡಿ, ಶ್ರೀ ಬಿ. ಕೊಂಗಳಪ್ಪ, ವಡ್ಡರಹಳ್ಳಿ, ಶ್ರೀ ಕೆ.ಆರ್. ಚಂದ್ರಶೇಖರ್, ಪ್ರಥಮ ದರ್ಜೆ ಗುತ್ತಿಗೆದಾರರು, ಕಿಲಗೆರೆ, ಶ್ರೀ ಪಟೇಲ್ ಎಚ್.ಎಂ.

ಪುಟ್ಟಮಾದಯ್ಯ ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶಾಲೆಯ ಹಲವಾರು ಹಿರಿಯ ವಿದ್ಯಾರ್ಥಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು. ಶಿಕ್ಷಕರಾದ ಶ್ರೀ ನಟರಾಜುರವರು ಕಾರ್ಯಕ್ರಮವನ್ನು ನಿರೂಪಿಸಿದರು. ಹಿರಿಯ ವಿದ್ಯಾರ್ಥಿಗಳಾದ ಶ್ರೀ ಎ.ಎಸ್. ಗುರುಸ್ವಾಮಿಯವರು ಸ್ವಾಗತಿಸಿದರೆ ಶ್ರೀ ಮಹದೇವನಾಯಕರು ವಂದಿಸಿದರು.

ಕಾರ್ಯಕ್ರಮದ ನಂತರ ನಡೆದ ವಸ್ತುಪ್ರದರ್ಶನದಲ್ಲಿ ಸುಮಾರು ಹತ್ತು ಪ್ರೌಢಶಾಲೆಯ ಮಕ್ಕಳು ಪಾಠೋಪಕರಣಗಳನ್ನು ಪ್ರದರ್ಶಿಸಿದ್ದರು. ಅದೇ ದಿನ ನಡೆದ ಸಾಮೂಹಿಕ ನೃತ್ಯ ಸ್ಪರ್ಧೆಯಲ್ಲಿ ಎಂಟು ಶಾಲೆಗಳ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 30.12.2008 ರಂದು ರಜತ ಮಹೋತ್ಸವದ ಸಮಾರೋಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಜೆಎಸ್ಎಸ್ ವಿಜ್ಞಾನ ಮತ್ತು ಸಮಾಜ ಪ್ರತಿಷ್ಠಾನದ ಗೌರವ ನಿರ್ದೇಶಕರು ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಆದ ಡಾ. ಕೆ.ಎಸ್. ಸಿದ್ದಪ್ಪನವರು ವಸ್ತುಪ್ರದರ್ಶನವನ್ನು ತುಂಬ ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಏರ್ಪಡಿಸಲಾಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಗೌಡರ ಗುರುಮಲ್ಲಪ್ಪರವರು, ಶ್ರೀ ಬಿ. ಸಿದ್ದಮಲ್ಲಯ್ಯನವರು, ಶ್ರೀಮತಿ ಮುಕ್ತಾ ಬಿ. ಕಾಗಲಿ, ಸಂಯೋಜನಾಧಿಕಾರಿಗಳು, ಜೆಎಸ್ಎಸ್ ವಿಜ್ಞಾನ ಮತ್ತು ಸಮಾಜ ಪ್ರತಿಷ್ಠಾನ, ಶ್ರೀಮತಿ ಲೀಲಾವತಮ್ಮ, ಪ್ರಾಂಶುಪಾಲರು, ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಯಳಂದೂರು, ಶ್ರೀಮತಿ ಕೆ.ಎಂ. ದಾಕ್ಷಾಯಿಣಿ, ಶ್ರೀ ಶಿವಣ್ಣನಾಯಕ ಇವರುಗಳು ಉಪಸ್ಥಿತರಿದ್ದರು. ಇತರ ಶಾಲೆಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ವಿತರಿಸಲಾಯಿತು.

## ಜೆಎಸ್ಎಸ್ ಮಹಿಳಾ ಕಾಲೇಜು, ಚಾಮರಾಜನಗರ

"ಸಣ್ಣ ಝರಿಯಾಗಿ ಹರಿದ ನೀರು ನಂತರ ದೊಡ್ಡ ಪ್ರಮಾಣದಲ್ಲಿ ಹರಿಯುತ್ತಾ ನದಿಯಾಗಿ ಸಮುದ್ರವನ್ನು ಸೇರುವಂತೆ, ವಿದ್ಯಾರ್ಥಿಗಳು ಮೊದಲು ಚಿಕ್ಕ ಚಿಕ್ಕ ರಚನೆಗಳ ಮೂಲಕ ಪ್ರಾರಂಭಿಸಿ ಅನಂತರ ದೊಡ್ಡ ಬರಹಗಳಲ್ಲಿ ತೊಡಗಿಸಿಕೊಳ್ಳಬೇಕು" ಎಂದು ಚಾಮರಾಜನಗರ ಜಿಲ್ಲಾ ಗ್ರಂಥಾಲಯಾಧಿಕಾರಿಗಳಾದ ಶ್ರೀ ದಿವಾಕರ ಅವರು ಅಭಿಪ್ರಾಯಪಟ್ಟರು.




ದಿನಾಂಕ 19.12.2008 ರಂದು ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ನಡೆದ 'ವಿದ್ಯಾರ್ಥಿ ಕವಿಗೋಷ್ಠಿ'ಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಮಾಜದಲ್ಲಿರುವ ಆದರ್ಶ ವ್ಯಕ್ತಿಗಳಿಂದ ವಿದ್ಯಾರ್ಥಿಗಳು ಚೆನ್ನಾಗಿ ಕಲಿಯಬೇಕು, ಬೆಳೆಯಬೇಕು; ಕವನ ರಚಿಸುವ ಕಲೆ ತುಂಬಾ ಅದ್ಭುತವಾದುದು. ವಿದ್ಯಾರ್ಥಿಜೀವನದಲ್ಲಿ ಅದನ್ನು ಮೈಗೂಡಿಸಿಕೊಂಡರೆ, ಉತ್ತಮ ಕವನಗಳನ್ನು ಬರೆಯುವ ಮೂಲಕ ಕೀರ್ತಿಶಾಲಿಗಳಾಗಬಹುದು. ನಾವು ಬಳಸುವ ಭಾಷೆಯಲ್ಲಿ ಪರಕೀಯತೆಯ ಪ್ರಭಾವವನ್ನು ಕೈಬಿಡಬೇಕೆಂದು ಯುವಕವಿಗಳಿಗೆ ಕಿವಿಮಾತು ಹೇಳಿದರು.

ವಿಭಾಗದ ಅಧ್ಯಾಪಕರಾದ ಡಾ. ಎಂ.ವಿ. ರವಿಯವರು ಮಾತನಾಡಿ, ಕಾವ್ಯರಚನೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತೊಡಗಿಕೊಳ್ಳುವುದಕ್ಕೂ ಮೊದಲು ಹೆಚ್ಚು ಹೆಚ್ಚು ಪುಸ್ತಕಗಳ ಅಧ್ಯಯನ ಮಾಡಬೇಕೆಂದು ನುಡಿದರು. ಈ ಕಾರ್ಯಕ್ರಮದ ರೂವಾರಿಗಳಾದ ಡಾ. ರಾಜಶೇಖರ ಜಮದಂಡಿಯವರು ಮತ್ತು ವಿದ್ಯಾರ್ಥಿಗಳಾದ ಶ್ರೀ ಕು.ನಾ. ಶಿವಕುಮಾರ್, ಶ್ರೀ ಹು.ಗ. ಚಂದ್ರಶೇಖರ, ಶ್ರೀ ಮಹಾದೇವಸ್ವಾಮಿ, ಶ್ರೀ ಚಿನ್ನಸ್ವಾಮಿ ಮುಂತಾದವರು ಕವನ ವಾಚಿಸಿದರು. □

## ಜೆಎಸ್‌ಎಸ್ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು



"ಸಂಸ್ಕಾರವನ್ನು ಕಲಿಸಿಕೊಡುವ ಶಿಕ್ಷಣ ಇಂದಿನ ಅಗತ್ಯವಾಗಿದೆ. ಇಂತಹ ಶಿಕ್ಷಣವನ್ನು ನೀಡುತ್ತಿರುವುದು ಜೆಎಸ್‌ಎಸ್ ವಿದ್ಯಾಸಂಸ್ಥೆ" ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಡಾ. ನೀಲಗಿರಿ ತಳವಾರರು ನುಡಿದರು. ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು ಜೆಎಸ್‌ಎಸ್ ವಿದ್ಯಾಸಂಸ್ಥೆಯು ದಕ್ಷತೆ, ಶಿಸ್ತು, ಸಂಸ್ಕೃತಿಗೆ ಹೆಸರಾಗಿದೆ ಎಂದರು. ಅರಿವಿನ ಉಪಾಸಕರಾಗಿ, ಕೀಳರಿಮೆ ಬಿಡಿ, ಆತ್ಮವಿಶ್ವಾಸದಿಂದ ಜೀವನವನ್ನು ರೂಪಿಸಿಕೊಳ್ಳಿ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಮಾಧುರಿ ತಾತಾಚಾರ್‌ರವರು ಪೋಷಕರು ಮತ್ತು ಶಿಕ್ಷಕರು ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡಾಗ ವಿದ್ಯಾರ್ಥಿಗಳೂ ಕೂಡ ಉತ್ತಮರಾಗಿ ಬೆಳೆಯಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಜಿ.ಎನ್. ವಿಶ್ವನಾಥ್‌ರವರು ಶಾಲೆಯ ವಾರ್ಷಿಕ ಸಂಚಿಕೆ "ವೈಜಯಂತ"ವನ್ನು ಬಿಡುಗಡೆ ಮಾಡಿ, "ಜೀವನದಲ್ಲಿ ಯಾವುದೇ ಹಿನ್ನಡೆಗೆ ಚಿಂತಿತರಾಗಬೇಡಿ. ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ, ಮುಂದೆ ಬನ್ನಿ" ಎಂದು ನುಡಿದರು.

ವಾರ್ಷಿಕೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅತಿಥಿಗಳಿಂದ ಬಹುಮಾನ ವಿತರಿಸಲಾಯಿತು. □

## ಸಂಸ್ಕೃತೋತ್ಸವ - 2009

ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳ ಸಂಸ್ಕೃತ ವಿಭಾಗದವರು ಸೇರಿ, ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ದಿನಾಂಕ 6.1.2009ರಂದು ಸಂಸ್ಕೃತೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿದರು.

ಪ್ರೊ. ವಿಶ್ವನಾಥ್ ಮತ್ತು ತಂಡದವರ ವೇದಘೋಷದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು.

ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯನಿಯವರಾದ ಶ್ರೀಮತಿ ಸುನಂದ ಭೂಪಾಲಿಯವರು ಸಭಿಕರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಉತ್ಸವದ ಅಂಗವಾಗಿ ಶ್ಲೋಕ, ಅಂತ್ಯಾಕ್ಷರಿ, ವೇದ ಪಠನ, ಆಶುಭಾಷಣ, ಸುಭಾಷಿತ, ಕಂಠಪಾಠ ಸ್ಪರ್ಧೆಯನ್ನು ಮತ್ತು ಉಕ್ತಲೇಖನ ಸ್ಪರ್ಧೆಗಳನ್ನು ವಿವಿಧ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಏರ್ಪಡಿಸಲಾಗಿತ್ತು.

ಬಟ್ಟೆಗುರುಡನ ಕೈಯ ಬಟ್ಟೆಗುರುಡ ಹಿಡಿದು ಹಳ್ಳವ ಬಿದ್ದಂತೆ ಕಾಣಾ - ಚೆನ್ನಯ್ಯ

ಈ ಸ್ಪರ್ಧೆಗಳ ವಿವರಗಳನ್ನು ಜೆ.ಸಿ. ಕ್ಯಾಂಪಸ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಂಸ್ಕೃತ ಶಿಕ್ಷಕರಾದ ಶ್ರೀ ಸುರೇಶ್ ಹೆಗ್ಡೆಯವರು ವಾಚಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿದ್ವಾನ್ ಶ್ರೀ ಎಚ್.ವಿ. ನಾಗರಾಜಾರಾವ್‌ರವರು "ಸಂಸ್ಕೃತವು ಪ್ರಾಚೀನ ಭಾಷೆಯಾಗಿದ್ದು ಇಂತಹ ಸರಳ ಭಾಷೆಯನ್ನು ಕಲಿಯಲು ಪ್ರತಿಯೊಬ್ಬರೂ ಆಸಕ್ತಿ ತೋರಬೇಕು" ಎಂದು ನುಡಿದರು.

ಇದಕ್ಕೆ ಮುಂಚೆ ನಡೆದ ಔಪಚಾರಿಕ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ರಾಷ್ಟ್ರ ಪ್ರಶಸ್ತಿ ವಿಜೇತರಾದ ಸಂಸ್ಕೃತ ವಿದ್ವಾನ್ ಡಾ. ಎಂ. ಇ. ರಂಗಾಚಾರ್ಯರವರನ್ನು ಸನ್ಮಾನಿಸಿದರು.

ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್.ಬಿ. ತುರುಕನಗೇರಿಯವರು ಸಭೆಗೆ ಡಾ. ರಂಗಾಚಾರ್ಯರ ಪರಿಚಯವನ್ನು ಮಾಡಿಕೊಟ್ಟರು.

ಉಪನಿರ್ದೇಶಕಿ ಶ್ರೀಮತಿ ವೀಣಾ ಆರ್. ನಾಯಕ್‌ರವರು ಮುಖ್ಯ ಅತಿಥಿಯಾಗಿ ಮಾತನಾಡಿ, ಭಾರತದ ಪ್ರಾಚೀನ ಭಾಷೆಯಾಗಿರುವ ಸಂಸ್ಕೃತದ ಅಭಿವೃದ್ಧಿಗೆ ಇಂತಹ ಉತ್ಸವಗಳು ಸಹಕಾರಿಯಾಗಿದ್ದು ಸಂಸ್ಕೃತವು ಜನರು ಮಾತನಾಡುವ ಭಾಷೆಯಾಗಬೇಕು ಎಂದು ಹೇಳಿದರು.

ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ನಾಗೇಂದ್ರಕುಮಾರ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದು, ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಜೆ. ಭಾಸ್ಕರಯ್ಯನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಸಂಸ್ಕೃತ ಭಾಷಾ ಶಿಕ್ಷಕರಿಗೆ "ಪುನಶ್ಚೇತನ" ಕಾರ್ಯಾಗಾರದ ಮೂಲಕ ವಿಶೇಷವಾದ ತರಬೇತಿಯನ್ನು ನೀಡುವುದು ಅಗತ್ಯವೆಂದು ತಿಳಿಸಿದರು.



ಸನ್ಮಾನಿತರಾದ ಡಾ. ರಂಗಾಚಾರ್ಯರು "ಸಂಸ್ಕೃತವನ್ನು ಕೇವಲ ಸಾಹಿತ್ಯ ಭಾಷೆಯನ್ನಾಗಿ ಮಾತ್ರ ಬಳಸುತ್ತಿರುವುದು ವಿಷಾದನೀಯ. ಭಾರತೀಯರಾದ ನಾವು ನಮ್ಮ ಪ್ರಾಚೀನತೆಯ ಸಂಕೇತವಾದ ಸಂಸ್ಕೃತ ಭಾಷೆಯನ್ನು ಆಡುಭಾಷೆಯಾಗಿ ಬಳಸುವ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸುವ ಕೆಲಸ ಮಾಡಬೇಕಾಗಿದೆ" ಎಂದು ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಸ್ಕೃತ ವಿಭಾಗದ

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಎಚ್.ವಿ. ಶೇಷಗಿರಿರಾವ್‌ರವರು ಉಪಸ್ಥಿತರಿದ್ದು, ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ವನ್ನು ನೀಡಿದರು.

## ಜೆಎಸ್‌ಎಸ್ ಪದವಿಪೂರ್ವ ಮಹಿಳಾ ಕಾಲೇಜು ಸರಸ್ವತಿಪುರಂ, ಮೈಸೂರು



"ನನ್ನ ಅನುಭವದಲ್ಲಿ ಮೈಸೂರಿನಲ್ಲಿ ಹಿಂದಿಯಲ್ಲಿ ರಸಪ್ರಶ್ನೆ ಯಂಥ ಕಾರ್ಯಕ್ರಮವು ನಡೆಯುತ್ತಿರುವುದು ಇದೇ ಮೊದಲು. ನಿಮ್ಮ ಕಾಲೇಜಿನಲ್ಲಿ ಇಂಥಾ ಕಾರ್ಯಕ್ರಮವನ್ನು ಸತತವಾಗಿ ನಡೆಸಿಕೊಂಡು ಬರಲಾಗುತ್ತಿದೆ ಎಂದು ತಿಳಿದು ಸಂತೋಷವಾಗಿದೆ. ಇವು ತುಂಬ ಆಕರ್ಷಕವಾಗಿದ್ದು ವಿದ್ಯಾರ್ಥಿಗಳ ಜ್ಞಾನವಿಕಾಸಕ್ಕೆ ಬಹಳ ಸಹಕಾರಿಯಾಗಿರುತ್ತವೆ. ಹಿಂದಿಯು ಮಧುರ, ಸುಂದರ, ಸರಳ ಭಾಷೆಯಾಗಿದ್ದು ಕಲಿಯಲು ಸುಲಭವಾಗಿದೆ. ಹಿಂದಿಯು ಭಾರತದ ಪ್ರಾಣಕ್ಕೆ ಸಮಾನ. ಹಿಂದಿ ಭಾಷೆಯಿಲ್ಲದ ಭಾರತವನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಹಿಂದಿ ಕಲಿತವರಿಗೆ ಕೇಂದ್ರ ಸರಕಾರದ ಉದ್ಯೋಗಾವಕಾಶಗಳು ವಿಪುಲವಾಗಿವೆ."

ದಿನಾಂಕ 7.1.2009 ರಂದು ಕಾಲೇಜಿನ ಹಿಂದಿ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ರಸಪ್ರಶ್ನೆ ಹಾಗೂ ಸಂಘದ ಸಮಾರೋಪ ಸಮಾರಂಭದಲ್ಲಿ ಮಹಾರಾಣಿ ವಿಜ್ಞಾನ ಪದವಿ ಕಾಲೇಜಿನ ಹಿಂದಿ ಪ್ರಾಧ್ಯಾಪಕಿಯೂ, ಮುಖ್ಯಸ್ಥೆಯೂ ಆದ ಡಾ. ಬಿ. ನಿರ್ಮಲಾರವರು ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಾ ಮೇಲ್ಕಂಡಂತೆ ನುಡಿದರು.

ಇನ್ನೊಬ್ಬ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪದವಿ ಮಹಿಳಾ ಕಾಲೇಜಿನ ಗ್ರಂಥಪಾಲಕರಾದ ಶ್ರೀಮತಿ ಎಚ್.ಎಸ್. ಉಮಾದೇವಿ ಯವರು, "ಸರಕಾರವು ಜಾರಿಗೆ ತಂದಿರುವ ತ್ರಿಭಾಷಾ ಸೂತ್ರದಿಂದ ಮಕ್ಕಳು ಕಡ್ಡಾಯವಾಗಿ ಮೂರೂ ಭಾಷೆಗಳನ್ನು ಕಲಿಯುತ್ತಾರೆ. ಇದರಿಂದ ಅವರು ತಮ್ಮ ಎಲ್ಲ ವ್ಯವಹಾರಗಳನ್ನು ಸಲೀಸಾಗಿ ನಿಭಾಯಿಸಲು ಅನುಕೂಲವಾಗುತ್ತದೆ" ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ರಾದ ಪ್ರೊ. ಸೋಮಣ್ಣರವರು, "ಕಾಲೇಜಿನ ಹಿಂದಿ ವಿಭಾಗವು ಪ್ರತಿ ವರ್ಷವೂ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಇದೇ ರೀತಿ ಇತರ ವಿಭಾಗದವರೂ ಕಾರ್ಯಕ್ರಮಗಳನ್ನು ನಡೆಸಿದರೆ ವಿದ್ಯಾರ್ಥಿನಿಯರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಹೆಚ್ಚು ಅವಕಾಶ ಒದಗುತ್ತದೆ" ಎಂದರಲ್ಲದೆ ರಸಪ್ರಶ್ನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಹಿಂದಿ ವಿಭಾಗದ ಪ್ರೊ. ಶಶಿಕಲಾರವರನ್ನು ಅಭಿನಂದಿಸಿದರು.

ರಸಪ್ರಶ್ನೆ, ಆಶುಕವಿತೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮತ್ತು ಹಿಂದಿಯಲ್ಲಿ ಗರಿಷ್ಠ ಹಾಜರಾತಿ ಇರುವವರಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಣೆ ಮಾಡಿದರು.

ವಿದ್ಯಾರ್ಥಿನಿಯರೇ ಸ್ವತಃ ನಿರೂಪಿಸಿದ ಈ ಕಾರ್ಯಕ್ರಮವು ಹಿಂದಿಯಲ್ಲೇ ಜರುಗಿತು. ಕು. ವರ್ಷಾ (ಪ್ರಥಮ ಪಿಯುಸಿ), ಕು. ಶಬಾನಾ (ದ್ವಿತೀಯ ಪಿಯುಸಿ), ಕು. ರುಚಿ ಪವಾರ್ (ಪ್ರಥಮ ಪಿಯುಸಿ), ಕು. ಅಭಿಲಾಷಾ (ಪ್ರಥಮ ಪಿಯುಸಿ), ಕು. ಭಾರತಿ (ಪ್ರಥಮ ಪಿಯುಸಿ), ಕು. ಶ್ರುತಿ ಜೋಯಪ್ಪ (ದ್ವಿತೀಯ ಪಿಯುಸಿ) ಮತ್ತು ಕು. ಸ್ನೇಹ (ದ್ವಿತೀಯ ಪಿಯುಸಿ) ಇವರುಗಳು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ನೆರವಾದರು.

## ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು

ಕಾಲೇಜಿನಲ್ಲಿ ಎರಡನೇ ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡುತ್ತಿರುವ ಶ್ರೀ ಅಶೋಕ್ ಮತ್ತು ಕು. ಯಾಸ್ನಾ ಸಿಂಗ್ ಇವರು ಬಾಗಲಕೋಟೆಯ ಎಸ್. ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಲ್ಲಿ ನಡೆದ ರಾಜೀವ್ ಗಾಂಧಿ ಆರೋಗ್ಯವಿಜ್ಞಾನ ವಿಶ್ವವಿದ್ಯಾಲಯದ ಇಂಟರ್ ಕೊಲಿಜಿಯೆಟ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ (2008) ಕೆಳಕಂಡ ಪದಕಗಳನ್ನು ಗಳಿಸಿದ್ದಾರೆ.

| ಕ್ರಸಂ | ಹೆಸರು | ಸ್ಪರ್ಧೆ | ಗಳಿಸಿದ ಸ್ಥಾನ |
|---|---|---|---|
| 1. | ಶ್ರೀ ಅಶೋಕ್ | 200 ಮೀ. ರನ್ನಿಂಗ್ | ದ್ವಿತೀಯ |
| 2. | ಕು. ಯಾಸ್ನಾ ಸಿಂಗ್ | 400 ಮೀ. ರನ್ನಿಂಗ್ | ದ್ವಿತೀಯ |
| | | ಹೈ ಜಂಪ್ | ತೃತೀಯ |
| | | 200 ಮೀ. ರನ್ನಿಂಗ್ | ಚತುರ್ಥ |

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವು ಇತ್ತೀಚೆಗೆ ಬೆಂಗಳೂರಿನ ಸೆಂಟ್ ಜಾನ್ ವೈದ್ಯಕೀಯ ಕಾಲೇಜಿನಲ್ಲಿ



ನಡೆಸಿದ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ (2008) ಆಲ್ ಇಂಡಿಯಾ ಇಂಟರ್ ಹೆಲ್ತ್ ಯೂನಿವರ್ಸಿಟಿ ಇದೇ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಿದ್ದು, ಅವರ ಪೈಕಿ ಕು. ಯಾಸ್ನಾ ಸಿಂಗ್ ಇವರು ಮೂರು ಚಿನ್ನದ ಪದಕಗಳನ್ನು ಪಡೆದು ಬಂದಿದ್ದಾರೆ. ಅವುಗಳೆಂದರೆ 400 ಮೀ. ರನ್, 4x100 ಮೀ. ರಿಲೇ. 4x400 ಮೀ. ರಿಲೇ.

### ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ, ಸರಗೂರು ಎಚ್.ಡಿ. ಕೋಟೆ ತಾಲ್ಲೂಕು



ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಡಾ. ಸಿ.ಎನ್. ಮೃತ್ಯುಂಜಯಪ್ಪನವರು ಸುಮಾರು ಒಂದು ಲಕ್ಷ ರೂ.ಗಳ ಖರ್ಚಿನಲ್ಲಿ ನಿರ್ಮಿಸಿಕೊಟ್ಟ "ನಿವೇದಿತಾ ಮಕ್ಕಳ ಕ್ರೀಡಾವನ"ವನ್ನು ವಿಧಾನ ಪರಿಷತ್ ಸದಸ್ಯರಾದ ಶ್ರೀ ತೋಂಟದಾರ್ಯರು ಇತ್ತೀಚೆಗೆ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ವಿಭಾಗದ ನಿರ್ದೇಶಕರಾದ ಪ್ರೊ. ಟಿ.ಡಿ. ಸುಬ್ಬಣ್ಣನವರು, ಸಾಮಾನ್ಯ ಶಿಕ್ಷಣ ವಿಭಾಗದ ಉಪನಿರ್ದೇಶಕರಾದ ಶ್ರೀ ಎಚ್.ವಿ. ಶೇಷಗಿರಿ ರಾವ್, ಪ್ರಾಂಶುಪಾಲರಾದ ಶ್ರೀ ಕೆ.ಟಿ. ಚಂದ್ರಶೇಖರಾಚಾರ್, ಮುಖ್ಯೋಪಾಧ್ಯಾಯರಾದ ಶ್ರೀ ಮಹಮದ್ ಅಂಜುಮ್ ಪಾಷಾ ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

***

ಹಿರಿಯ ಪ್ರಾಥಮಿಕ ಶಾಲೆಯು ಇತ್ತೀಚೆಗೆ ಮಕ್ಕಳೇ ತಯಾರಿಸಿದ ಕಲಿಕೋಪಕರಣ, ವೈಜ್ಞಾನಿಕ ಉಪಕರಣ ಮತ್ತು ಮೆದುಳಿಗೆ ಕಸರತ್ತನ್ನು ನೀಡುವ ಮಾದರಿಗಳನ್ನೊಳಗೊಂಡ "ಶೈಕ್ಷಣಿಕ ವಸ್ತುಪ್ರದರ್ಶನ"ವನ್ನು ಏರ್ಪಡಿಸಿತ್ತು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಡಾ. ಸಿ.ಎನ್. ಮೃತ್ಯುಂಜಯಪ್ಪನವರು ವಸ್ತುಪ್ರದರ್ಶನವನ್ನು ಉದ್ಘಾಟಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಮತ್ತು ಶಾಲೆಯ ಸಿಬ್ಬಂದಿವರ್ಗದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ವಸ್ತುಪ್ರದರ್ಶನವನ್ನು ಸುಮಾರು 4,500 ಜನ ವೀಕ್ಷಿಸಿದ್ದಾರೆ. ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ಉತ್ತಮ ಮಾದರಿಗಳಿಗೆ ಬಹುಮಾನ ವಿತರಿಸಲಾಯಿತು.

### ಜೆಎಸ್‌ಎಸ್ ಪ್ರೌಢಶಾಲೆ, ಕೋಣನಕುಂಟೆ, ಬೆಂಗಳೂರು

ದಿನಾಂಕ 23.11.2008 ರಂದು ಶಾಲೆಯ ಆವರಣದಲ್ಲಿ ಪೋಷಕರ-ಶಿಕ್ಷಕರ ಸಭೆಯನ್ನು ಏರ್ಪಡಿಸಲಾಗಿತ್ತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ.ವಿ. ಪ್ರಭಾವತಿಯವರು ಪ್ರಾಸ್ತಾವಿಕ ನುಡಿಗಳೊಡನೆ ಸಭೆಗೆ ಸ್ವಾಗತವನ್ನು ಕೋರಿದರು.

ಡಾ. ಉಮಾರವರು "ಮಕ್ಕಳ ಮಾನಸಿಕ ಬೆಳವಣಿಗೆ" ಎಂಬ ವಿಷಯವನ್ನು ಕುರಿತು ಮಾತನಾಡುತ್ತ, ಒಂದು ಮಗು ಹುಟ್ಟಿದಾಗಿನಿಂದ ಹಲವಾರು ರೀತಿಯಲ್ಲಿ ಬೆಳವಣಿಗೆ ಹೊಂದುತ್ತದೆ.



ಪ್ರತಿಯೊಂದು ಮಗುವಿಗೂ ತನ್ನ ತಂದೆ ತಾಯಿಯಿಂದ ಹಲವಾರು ಅಂಶಗಳು ಬಳುವಳಿಯಾಗಿ ಬಂದಿರುತ್ತದೆ. ಮನೆಯಲ್ಲಿ ಸೌಹಾರ್ದಯುತ ವಾತಾವರಣವಿರಬೇಕು. ಮಗುವಿನ ಮಾನಸಿಕ

ಬೆಳವಣಿಗೆಯಷ್ಟೇ ದೈಹಿಕ ಬೆಳವಣಿಗೆ, ಸಾಮಾಜಿಕ ಬೆಳವಣಿಗೆಗಳೂ ಅಷ್ಟೇ ಮುಖ್ಯ. ಚಿಕ್ಕವರಿರುವಾಗ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶ ಕಲ್ಪಿಸಬೇಕು. ಇದೆಲ್ಲಕ್ಕಿಂತ ಮುಖ್ಯವಾಗಿ ಮಕ್ಕಳಲ್ಲಿ ನೈತಿಕ ಬೆಳವಣಿಗೆ ಮುಖ್ಯ. ಒಳ್ಳೆಯದು, ಕೆಟ್ಟದ್ದರ ನಡುವಣ ವಿವೇಚನೆ ಇರಬೇಕು. ಅನಂತರ ಬೌದ್ಧಿಕ ಬೆಳವಣಿಗೆಯಲ್ಲಿ ಪರಿಸರದ ಪ್ರಭಾವ ಬಹು ಮುಖ್ಯ. ಪೋಷಕರು ಅವಿದ್ಯಾವಂತರಾಗಿದ್ದರೂ ಮಕ್ಕಳ ಜೊತೆ ಬೆರೆಯಬೇಕು, ಉತ್ತಮ ವಾತಾವರಣ ಮೂಡಿಸಬೇಕು ಎಂದರು.

ಶ್ರೀ ಡಿ.ವಿ.ಜಿ. ಯವರು "ಒಂದು ಸಸಿಯನ್ನು ಬೆಳೆಸುವಂತೆ ಮಕ್ಕಳನ್ನು ಸರಿಯಾಗಿ ಬೆಳೆಸಬೇಕು" ಎಂದು ಒಂದೆಡೆ ಹೇಳಿದ್ದಾರೆ. ಮಗುವಿನ ಮಾನಸಿಕ ಬೆಳವಣಿಗೆಯ ಮೇಲೆ ಉತ್ತಮ ಪರಿಣಾಮವನ್ನು ಉಂಟುಮಾಡುವಂಥ ವಾತಾವರಣವನ್ನು ಮೂಡಿಸಬೇಕು. ಶಿಕ್ಷೆಯಿಂದ, ಭಯದಿಂದ ಮಕ್ಕಳಲ್ಲಿ ಪರಿವರ್ತನೆ ಸಾಧ್ಯವಿಲ್ಲ. ಆದರಿಂದ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಎಲ್ಲರ ಎದುರಿಗೆ ಮಕ್ಕಳನ್ನು ಬೈಯಬಾರದು. ಪ್ರತ್ಯೇಕವಾಗಿ ಕರೆದು ನಿಧಾನವಾಗಿ ತಿಳಿವಳಿಕೆ ಹೇಳಬೇಕು. ಮಗುವಿನ ಸ್ವಭಾವಕ್ಕೆ ಅನುಗುಣವಾಗಿ ಪೋಷಕರು ನಡೆದುಕೊಳ್ಳಬೇಕು. ಮಕ್ಕಳಲ್ಲಿ ಜವಾಬ್ದಾರಿಯನ್ನು ಹೆಚ್ಚಾಗಿ ಬೆಳೆಸಬೇಕು. ಸಣ್ಣ ಪುಟ್ಟ ಸಾಧನೆಗೂ ಮಕ್ಕಳನ್ನು ಪ್ರಶಂಸಿಸಬೇಕು.

ದೂರದರ್ಶನವನ್ನು ಬಂದ್ ಮಾಡಿ ಪ್ರತಿದಿನ ನಾವು ಮಕ್ಕಳೊಡನೆ 15-20 ನಿಮಿಷವಾದರೂ ಸಂತೋಷದಿಂದ ಕಾಲ ಕಳೆಯಬೇಕು, ಅದೇ ನಿಜವಾದ ಶಿಕ್ಷಣ ಎಂಬುದಾಗಿ ತಿಳಿಸಿದರು.

ಅನಂತರ ಶ್ರೀ ಎಚ್.ಎ. ಜಯಸಿಂಹರವರು "ವ್ಯಕ್ತಿತ್ವ ವಿಕಾಸ" ಎಂಬ ವಿಷಯವನ್ನು ಕುರಿತು ಮಾತನಾಡುತ್ತ, ಮನೆಯ ವಾತಾವರಣ, ನಮ್ಮ ನಡೆ-ನುಡಿ, ಭಾವನೆಗಳು ಇವುಗಳಿಂದ ವ್ಯಕ್ತಿತ್ವ ವಿಕಾಸವಾಗುತ್ತದೆ. ಉದಾಹರಣೆಗೆ, ಯಂಡಮೂರಿ ವೀರೇಂದ್ರನಾಥರ "ಮೈಂಡ್ ಪವರ್" ಎಂಬ ಪುಸ್ತಕದಲ್ಲಿ 25 ಅಂಶಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. "ಜಗತ್ತಿನಲ್ಲಿ ಎಲ್ಲವೂ ದೊಡ್ಡದಿದೆ, ಆದರೆ ಮನಸ್ಸು ಮಾತ್ರ ಚಿಕ್ಕದಿದೆ. ನನ್ನ ಬದುಕು ಹೀಗಾಯಿತು ಅನ್ನುವುದಕ್ಕಿಂತ ನನ್ನ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂಬುದರ ಬಗ್ಗೆ ಚಿಂತಿಸಬೇಕು" ಎಂದರು. "ಜಪಾನೀಯರು ಮಹಾಯುದ್ಧದ ಸಮಯದಲ್ಲಿ ಬಾಂಬ್ ದಾಳಿಯಿಂದ ಜರ್ಝರಿತರಾದರೂ, ಛಲದಿಂದ ಮುಂದೆ ನುಗ್ಗಿ ಇಂದು ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಮನುಷ್ಯನಲ್ಲಿ ಬದಲಾವಣೆ ಆಗಬೇಕಾದರೆ ನಮ್ಮಲ್ಲಿ ವಿವೇಚನೆ ಬಲಿಯಬೇಕು. ಕಲಿಕೆಯಿಂದ ಬದಲಾವಣೆ ಸಾಧ್ಯ. ಜೀವನಕ್ಕೆ ಅರ್ಥ ತರುವುದು ನಮ್ಮ ಗುರಿಯಾಗಬೇಕು" ಎಂದರು.

"ಸ್ವಾಮಿ ವಿವೇಕಾನಂದರು 'ಏಳಿ ಎದ್ದೇಳಿ ಎಚ್ಚರಗೊಳ್ಳಿ' ಎಂದರು. ಅಂದಿನ ಜನರು ಹಾಗೆಯೇ ಎಚ್ಚರಗೊಂಡು ಭಾರತವನ್ನು ಬ್ರಿಟಿಷರ ದಾಸ್ಯದಿಂದ ಬಿಡಿಸಿದರು. ಅಂದಿನ ದೇಶಪ್ರೇಮ, ತ್ಯಾಗ, ನಿಷ್ಠೆ ಇಂದು ಕಾಣುತ್ತಿಲ್ಲ. ಕೆಟ್ಟದ್ದು ನಮ್ಮ ಕಣ್ಣ ಮುಂದೆ ಬರದಂತೆ ನೋಡಿಕೊಳ್ಳಬೇಕು. ಮಕ್ಕಳಲ್ಲಿ ಯಾವುದೇ ಕೆಟ್ಟ ವಿಚಾರಗಳು ಮೂಡದಂತೆ ನೋಡಿಕೊಳ್ಳಬೇಕು. ದುಡ್ಡಿನ ಮೇಲಿನ ಅತಿಯಾದ ವ್ಯಾಮೋಹವನ್ನು ಪೋಷಕರು ಬಿಡಬೇಕು. ಹಣದಿಂದ ಎಲ್ಲವನ್ನೂ ಕೊಂಡುಕೊಳ್ಳಬಹುದು, ಆದರೆ ಪ್ರೀತಿ ಕರುಣೆಯನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ" ಎಂದು ಮಾರ್ಮಿಕವಾಗಿ ನುಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಭಾಸ್ಕರಯ್ಯರವರು ಮಾತನಾಡಿ, ಪೋಷಕರು ಮಕ್ಕಳನ್ನು ಶಾಲೆಗೆ ದಾಖಲಿಸಿದ ಮೇಲೆ ಮಕ್ಕಳ ಪ್ರಗತಿಯ ಜವಾಬ್ದಾರಿ ಪೋಷಕರು ಮತ್ತು ಶಿಕ್ಷಕರುಗಳಿಬ್ಬರಿಗೂ ಸೇರಿದುದಾಗಿದೆ. ಪೋಷಕರು ಶಿಕ್ಷಕರನ್ನು ಭೇಟಿಮಾಡಿ ಮಕ್ಕಳ ಪ್ರಗತಿಯ ಬಗ್ಗೆ ಆಗಿಂದಾಗ್ಗೆ ತಿಳಿದುಕೊಳ್ಳಬೇಕು. ಶಾಲೆಯಲ್ಲಿ ಶಿಕ್ಷಣ ಎಂದರೆ ಅದು ಕೇವಲ ಪಾಠಕ್ಕೆ ಮಾತ್ರ ಸೀಮಿತವಲ್ಲ, ಜೀವನಕೌಶಲವನ್ನು ಬೆಳೆಸುವುದು ಅಷ್ಟೇ ಮುಖ್ಯ ಎಂದರು. ಮಕ್ಕಳಿಂದ ನಾವು ಭವಿಷ್ಯದಲ್ಲಿ ಒಳ್ಳೆಯದನ್ನು ಅಪೇಕ್ಷಿಸುವುದಾದರೆ ಅವರಿಗೆ ನಾವು ಮಾದರಿಯಾಗಿರಬೇಕು. ತಿಂಗಳಿಗೆ ಒಂದು ದಿನವಾದರೂ ಪೋಷಕರು ಶಾಲಾ ಶಿಕ್ಷಕರನ್ನು ಭೇಟಿಯಾಗಬೇಕು. ಮಕ್ಕಳಲ್ಲಿ ಓದುವ ಅಭ್ಯಾಸ ಬೆಳೆಯಲು ನೆರವಾಗಬೇಕು. ಮಕ್ಕಳು ಶಾಲೆಯಿಂದ ಬಂದ ಬಳಿಕ, ಅಂದು ಶಾಲೆಯಲ್ಲಿ ನಡೆದ ವಿಚಾರಗಳ ಬಗ್ಗೆ ಆಸಕ್ತಿ ವಹಿಸಿ ತಿಳಿದುಕೊಳ್ಳಬೇಕು ಎಂದರು.

ಇಂತಹ ಸಭೆಗಳಿಂದ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸುವ ಬಗ್ಗೆ ಪೋಷಕರಲ್ಲಿ ಹೆಚ್ಚು ಹೆಚ್ಚು ತಿಳುವಳಿಕೆ ಮೂಡುತ್ತದೆ ಎಂದು ಪೋಷಕರು ಅಭಿಪ್ರಾಯ ವ್ಯಕ್ತಪಡಿಸಿದರು. ಪದವಿಪೂರ್ವ ಕಾಲೇಜನ್ನು ತೆರೆದಲ್ಲಿ ತಮ್ಮ ಮಕ್ಕಳಿಗೆ ಮುಂದಿನ ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವುದು ಎಂಬ ಅಪೇಕ್ಷೆಯನ್ನು ಅವರು ವ್ಯಕ್ತಪಡಿಸಿದರು.

**ಜೆಎಸ್‌ಎಸ್ ಸಂಯುಕ್ತ ಪದವಿಪೂರ್ವ ಕಾಲೇಜು ದೊಡ್ಡಕಾಡನೂರು, ಹಾಸನ ಜಿಲ್ಲೆ**

2008-09 ನೇ ಸಾಲಿನ ವಿಶೇಷ ಎನ್‌ಎಸ್‌ಎಸ್ ವಾರ್ಷಿಕ ಶಿಬಿರವನ್ನು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಬಳೆಅತ್ತಿಗುಪ್ಪೆ ಗ್ರಾಮದಲ್ಲಿ ನಡೆಸಲಾಯಿತು. ಕಾಲೇಜಿನಿಂದ ಸುಮಾರು 70 ಕಿ.ಮೀ. ದೂರದ ಈ ಅಪರಿಚಿತ ಗ್ರಾಮಕ್ಕೆ 50 ಸ್ವಯಂ ಸೇವಕರು, ಪ್ರಾಂಶುಪಾಲರು, ಕಾರ್ಯಕ್ರಮಾಧಿಕಾರಿ ಹಾಗೂ ಉಪ ಕಾರ್ಯಕ್ರಮಾಧಿಕಾರಿಗಳು ದಿನಾಂಕ 17.12.2008 ರಂದು ಭೇಟಿ ನೀಡಿದರು. ಗ್ರಾಮಪಂಚಾಯಿತಿ ಸದಸ್ಯರಾದ ಶ್ರೀ ಬಿ.ಸಿ. ಲೋಕೇಶ್ ಹಾಗೂ ರುಕ್ಮಿಣಿ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಪುಟ್ಟರಾಜು ಹಾಗೂ ಅವರ ಸಹೋದ್ಯೋಗಿಗಳು ಎನ್‌ಎಸ್‌ಎಸ್ ತಂಡವನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ದಿನಾಂಕ 17.12.2008 ರಂದು ಮಧ್ಯಾಹ್ನ ಬೇಬಿ ಮಠದ ದುರ್ದಂಡೇಶ್ವರ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು ಜ್ಯೋತಿ ಬೆಳಗಿಸುವುದರ ಮೂಲಕ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ, ಆಶೀರ್ವಚನ ನೀಡಿದರು. "ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವುದೇ ಸೇವೆ. ಸಮಾಜದಲ್ಲಿ ಹೊಂದಾಣಿಕೆ ಎಂಬುದು ಮುಖ್ಯ ಅಗತ್ಯ" ಎಂದು ನುಡಿದರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಶಾಂತಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಿಬಿರಾರ್ಥಿಗಳಿಗೆ ಶಿಸ್ತು, ಸಮಯಪಾಲನೆ ಹಾಗೂ ಶಿಬಿರದ ಉದ್ದೇಶಗಳನ್ನು ತಿಳಿಸಿದರು. ಗ್ರಾಮಸ್ಥರೊಂದಿಗೆ ಸಹಕಾರದಿಂದ ನಡೆದುಕೊಳ್ಳುವಂತೆ ಕಿವಿಮಾತು ಹೇಳಿದರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಉಪಾಧ್ಯಕ್ಷರಾದ ಶ್ರೀ ಧರ್ಮರಾಜು, ಮಂಡ್ಯ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಶ್ರೀ ಬಸವೇಗೌಡರು, ಗ್ರಾ.ಪಂ. ಸದಸ್ಯರಾದ ಶ್ರೀ ಬಿ.ಸಿ ಲೋಕೇಶ್ ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಶಿಬಿರಾರ್ಥಿಗಳಲ್ಲಿ ಅವರಲ್ಲಿ ಸೇವಾಮನೋಭಾವ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವ ಉದ್ದೇಶದಿಂದ ತಂಡಗಳಿಗೆ ವಿವೇಕಾನಂದ ತಂಡ, ವೀರ ಸಾವರ್ಕರ್ ತಂಡ, ಸುಭಾಷ್‌ಚಂದ್ರ ಬೋಸ್ ತಂಡ, ಶಿವಾಜಿ ತಂಡ ಹಾಗೂ ಭಗತ್‌ಸಿಂಗ್ ತಂಡ ಎಂದು ತಂಡಗಳಾಗಿ ವಿಂಗಡಿಸಿ ನಾಯಕ ಮತ್ತು ಉಪನಾಯಕನನ್ನು ಆಯ್ಕೆ ಮಾಡಿ ಅವರವರ ಜವಾಬ್ದಾರಿಗಳನ್ನು ತಿಳಿಸಲಾಯಿತು.

ಪ್ರತಿ ನಿತ್ಯ ಬೆಳಗ್ಗೆ ಧ್ವಜಾರೋಹಣ ಕಾರ್ಯಕ್ರಮ ನಡೆಯುತ್ತಿತ್ತು. 18.12.2008 ರಂದು ಶಾಲೆಯ ಆವರಣದ ಸ್ವಚ್ಛತೆ, ತೆಂಗು ಹಾಗೂ ತೇಗದ ಗಿಡಗಳಿಗೆ ಪಾತಿ, ಪಾಠಶಾಲೆ ಕಾಂಪೌಂಡ್ ಮುಂಭಾಗಗಳಲ್ಲಿ ಸ್ವಚ್ಛತಾ ಕಾರ್ಯ ಮಾಡಲಾಯಿತು. ಸಂಜೆ 7.00 ಗಂಟೆಗೆ ಮುಖ್ಯ ಭಾಷಣಕಾರರಾಗಿ ಶ್ರೀ ಸಿದ್ದೇಗೌಡರು, ಪರಿವೀಕ್ಷಕರು, ಮಂಡ್ಯ ಹಾಲು ಒಕ್ಕೂಟ ಇವರು ಹೈನುಗಾರಿಕೆ ವಿಷಯವಾಗಿ ಮಾತನಾಡುತ್ತಾ, "ಹಾಲಿನಲ್ಲಿ ಕಲಬೆರಕೆ ಬೇಡ, ಉತ್ತಮ ಗುಣಮಟ್ಟದ ಹಾಲನ್ನು ಒಕ್ಕೂಟಕ್ಕೆ ಕೊಡಿ ಹಾಗೂ ಹಾಲಿನ ಗುಣಮಟ್ಟವನ್ನು ಕಾಪಾಡಿಕೊಳ್ಳಿ" ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವೈರಮುಡಿ ಗೌಡರು, ಮಾಜಿ ಅಧ್ಯಕ್ಷರು, ಮಂಡ್ಯ ಹಾಲು ಒಕ್ಕೂಟ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಚಾಮಪ್ಪನವರು, ಶಿವಲಿಂಗಪ್ಪನವರು ಮತ್ತು ಲಕ್ಷ್ಮೀನಾರಾಯಣ ಅವರು ಸಭೆಗೆ ಆಗಮಿಸಿದ್ದರು.

19.12.2008 ರಂದು ಶ್ರಮದಾನ ಮಾಡಿ, ಒಳಚರಂಡಿಯ ಹೂಳನ್ನು ತೆಗೆಯಲಾಯಿತು. ಸಂಜೆ 7ಕ್ಕೆ ಕೃಷಿ ಹುಟ್ಟುವಳಿಯಲ್ಲಿ ಲಘು ಪೋಷಕಾಂಶದ ಕುರಿತು ಶ್ರೀ ರಾಜೇಂದ್ರ, ಕೃಷಿ ಅಧಿಕಾರಿ, ಪಾಂಡವಪುರ ರವರು ಮಾತನಾಡುತ್ತಾ, ಕಾಂಪೋಸ್ಟ್ ಗುಂಡಿಗಳ ಅಳತೆಯ ಬಗ್ಗೆ ಮತ್ತು ಕೃಷಿ ಇಲಾಖೆಯಿಂದ ಸಿಗುವ ಸಹಾಯಧನದ ಬಗ್ಗೆ ಮಾಹಿತಿ ನೀಡಿದರು. ಊಟದ ನಂತರ ಡೈರಿ ಬರೆಯುವ ಕಾರ್ಯವನ್ನು ಕಾರ್ಯಕ್ರಮಾಧಿಕಾರಿಗಳು ಪರಿಶೀಲಿಸಿದರು.

20.12.2008 ರಂದು ಹೂಳನ್ನು ತೆಗೆದು ಚರಂಡಿ ಸ್ವಚ್ಛ ಮಾಡುವ ಶ್ರಮದಾನದ ಕೆಲಸ ಮುಂದುವರಿಸಲಾಯಿತು. ಸಂಜೆಯ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಜಿ. ತಿಪ್ಪೇಸ್ವಾಮಿ, ಅರ್ಥಶಾಸ್ತ್ರ ಉಪನ್ಯಾಸಕರು, ಜೆಎಸ್‌ಎಸ್ ಸಂ.ಪ.ಪೂ.ಕಾ., ದೊಡ್ಡಕಾಡನೂರು ಇವರು ತೋಟಗಾರಿಕೆ ಬೆಳೆಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀ ಗುಣಶೇಖರ್, ಅಧ್ಯಕ್ಷರು ಕ.ರ.ವೇ. ಪಾಂಡವಪುರ, ರಾ.ಸೇ.ಯೋ. ರಾಜ್ಯ ಪ್ರಶಸ್ತಿ ವಿಜೇತರು ಅಧ್ಯಕ್ಷತೆಯನ್ನು ವಹಿಸಿದ್ದರು. ಇಂಥ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ಕೂಡಿ ಬಾಳುವ ಮನೋಭಾವ ಬೆಳೆಯುತ್ತದೆ ಎಂದು ಅವರು ನುಡಿದರು. ಶ್ರೀಮತಿ ಭಾರತಿ, ಅಧ್ಯಕ್ಷರು, ಕ.ರ.ವೇ. ಪಾಂಡವಪುರ, ಶ್ರೀ ಕುಮಾರಸ್ವಾಮಿ, ಮಂಡ್ಯಮಾತು ಪತ್ರಿಕೆ ಹಾಗೂ ಶ್ರೀ ಎನ್. ಕೃಷ್ಣೇಗೌಡ, ಪ್ರಜಾವಾಣಿ ವರದಿಗಾರರು ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

21.12.2008 ರಂದು ಶ್ರಮದಾನ ಕಾರ್ಯದಲ್ಲಿ ಕಾಂಪೋಸ್ಟ್ ಗೊಬ್ಬರದ ಗುಂಡಿಯನ್ನು ತೆಗೆಯಲಾಯಿತು. ಶಿಬಿರದ ಬಗ್ಗೆ ಚರ್ಚೆ ಹಾಗೂ ಸಂವಾದ ಕಾರ್ಯ ನಡೆಯಿತು. ಸಂಜೆ ಶ್ರೀ ಎನ್. ಮಹದೇವಪ್ಪನವರು, ಅಧ್ಯಾಪಕರು, ಸಂ.ಪ.ಪೂ.ಕಾಲೇಜು, ಅರಳಕುಪ್ಪೆ ಇವರು "ಪವಾಡಗಳ ರಹಸ್ಯ ಬಯಲು" ಎಂಬ ವಿಷಯವಾಗಿ ಮಾತನಾಡಿದರು. ಡಾ. ಬಿ.ಆರ್. ಜಯರಾಂ, ಹಿರಿಯ ವೈದ್ಯರು, ತಾಲ್ಲೂಕು ಆಸ್ಪತ್ರೆ ಇವರು "ಸಾಂಕ್ರಾಮಿಕ ರೋಗಗಳು" ಎಂಬ ವಿಷಯವಾಗಿ ಭಾಷಣ ಮಾಡಿದರು. ಗ್ರಾಮದ ಪ್ರತಿಯೊಂದು ಮನೆಯಲ್ಲೂ ಶೌಚಾಲಯಗಳು ಇರಬೇಕಾದ ಅಗತ್ಯ ಮತ್ತು ಪ್ರಯೋಜನಗಳನ್ನು ತಿಳಿಸಿ ಇವುಗಳ ನಿರ್ಮಾಣಕ್ಕೆ ಗ್ರಾಮಪಂಚಾಯಿತಿಯ ವತಿಯಿಂದ 2,000 ರೂ.ಗಳ ಧನಸಹಾಯ ವನ್ನು ನೀಡುತ್ತಾರೆಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ದಿನಾಂಕ 22.12.2008 ರಂದು ಪಶು ಆರೋಗ್ಯ ತಪಾಸಣಾ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಸುಮಾರು 300 ದನಗಳು, 200 ಎಮ್ಮೆಗಳು, 150 ಹೋರಿಗಳು, 250 ಕುರಿಗಳು ಹಾಗೂ 100 ಮೇಕೆಗಳಿಗೆ ಲಸಿಕೆಯನ್ನು ಹಾಕಿಸಲಾಯಿತು. ದೇವಸ್ಥಾನದ ಆವರಣ, ಬಸ್ ನಿಲ್ದಾಣದ ಹಿಂಭಾಗಗಳಲ್ಲಿ ಒಳಚರಂಡಿ ಕೆಲಸವನ್ನು ಮಾಡಲಾಯಿತು. ಸಂಜೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಕೃಷ್ಣೇಗೌಡ, ಪ್ರಜಾವಾಣಿ ವರದಿಗಾರರು ರವರು ಆಗಮಿಸಿ ಎನ್‌ಎಸ್‌ಎಸ್ ಶಿಬಿರಗಳು ಗ್ರಾಮೀಣ ಜನರಲ್ಲಿ ಶಿಕ್ಷಣ, ಆರೋಗ್ಯ ಮತ್ತು ಮೂಢನಂಬಿಕೆ ಹಾಗೂ ಕಂದಾಚಾರಗಳ ಬಗ್ಗೆ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ದಿನಾಂಕ 23.12.2008 ರಂದು ಹೂಳೆತ್ತುವ ಕೆಲಸ ಮುಂದುವರಿಯಿತು. ಚರಂಡಿಗಳನ್ನು ಸ್ವಚ್ಛವಾಗಿಟ್ಟುಕೊಂಡಾಗ ಯಾವುದೇ ದುರ್ವಾಸನೆ, ರೋಗರುಜಿನ ಬಾರದಂತೆ ತಡೆಗಟ್ಟ ಬಹುದೆಂದು ಗ್ರಾಮಸ್ಥರಿಗೆ ಅರಿವು ಮೂಡಿತು. ಸಮಾರೋಪ ಸಮಾರಂಭದ ದಿವ್ಯ ಸಮ್ಮುಖವನ್ನು ಶ್ರೀ ಸದಾಶಿವ ಸ್ವಾಮಿಗಳು ರಾಮಯೋಗೀಶ್ವರ ಮಠ ಬೇಬಿ ಬೆಟ್ಟ ರವರು ವಹಿಸಿ ರಾಷ್ಟ್ರೀಯ ಸೇವಾ ಯೋಜನೆಯು ನಾಡಿನಾದ್ಯಂತ ಕ್ರಿಯಾಶೀಲ ವಾಗಿರುವುದರಿಂದ ನಮ್ಮ ರಾಷ್ಟ್ರದ ಹಳ್ಳಿಯ ಜನ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದು, ಹಳ್ಳಿಯ ಬಡಜನತೆಗೆ ನೈರ್ಮಲೀಕರಣ, ಆರೋಗ್ಯ, ಜಾನುವಾರುಗಳ ಬಗ್ಗೆ, ಕೃಷಿ ಚಟುವಟಿಕೆಯ ಬಗ್ಗೆ ವಿಶೇಷವಾದ ಜ್ಞಾನವನ್ನು ನೀಡುತ್ತಾ ಬಂದಿರುವುದು ಹೆಮ್ಮೆಯ ವಿಷಯ. ಇಂತಹ ಕಾರ್ಯಕ್ರಮದಲ್ಲಿ ಎಲ್ಲರೂ ಸಹಕರಿಸಿ ನಡೆದಾಗ ಮಾತ್ರ ಈ ಕಾರ್ಯಕ್ರಮಗಳು ಯಶಸ್ವಿಯಾಗಲು ಸಾಧ್ಯವಾಗುತ್ತವೆ ಎಂದರು.

---

# ಸುತ್ತೂರು ಜಾತ್ರೆ ಜೀವನ ಯಾತ್ರೆ: ಒಂದು ಹಿನ್ನೋಟ

## ಭಕ್ತರೊಬ್ಬರ ಅನಿಸಿಕೆಗಳು

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು, ಸುತ್ತೂರು ಜಾತ್ರೆಯು ದಿನಾಂಕ 22.1.2009 ರಿಂದ 27.1.2009ರವರೆಗೆ ನಡೆಯಿತು. ಇದೊಂದು ವೈಶಿಷ್ಟ್ಯಪೂರ್ಣ ಜಾತ್ರೆಯಾಗಿದೆ. ಆರು ದಿನಗಳ ಕಾಲ ನಡೆದ ಈ ಜಾತ್ರೆ ನಿಜವಾಗಿಯೂ ಪ್ರೌಢಪ್ರಬಂಧ (ಪಿಎಚ್.ಡಿ) ಅಧ್ಯಯನಕ್ಕೆ ಯೋಗ್ಯವಾಗಿದೆ ಎಂದರೆ ಅತಿಶಯೋಕ್ತಿ ಅಲ್ಲ. ಎಂತೆಂತಹುದೋ ವಿಷಯಗಳ ಬಗ್ಗೆ ಪಿಎಚ್.ಡಿ. ಮಾಡುವ ಬದಲು ಈ ಜಾತ್ರೆಯ ಬಗ್ಗೆ ಮಾಡುವುದು ಉತ್ತಮ. ನಾನು ಈ ಜಾತ್ರೆಯ ವೈಭವ ಮತ್ತು ವೈಶಿಷ್ಟ್ಯವನ್ನು ತಿಳಿಯಲು ಪ್ರತಿ ದಿನ 18 ಗಂಟೆಗಳಂತೆ ಜಾತ್ರೆಯಲ್ಲೆಲ್ಲಾ ಅಡ್ಡಾಡಿದೆ. ಆಗ ನನಗೆ ಅತಿಶಯ ಅನ್ನಿಸಿದ್ದು ಸುತ್ತೂರು ಜಾತ್ರೆಯು ಕರ್ನಾಟಕದ ಸಂಸ್ಕೃತಿಯ ಒಂದು ಚಿಕ್ಕ ಮೂರ್ತರೂಪವೆನಿಸಿತು. ಒಂದೆರಡು ವರ್ಷಗಳಲ್ಲಿ 'ಕರ್ನಾಟಕ ಸಂಸ್ಕೃತಿ' ಎಂಬುದರ ಬದಲಾಗಿ 'ಭಾರತ ಸಂಸ್ಕೃತಿ' ಎಂದು ಬರೆಯಬೇಕಾಗಿ ಬಂದರೆ ಅದೇನೂ ಆಶ್ಚರ್ಯವಲ್ಲ.

ಈ ಜಾತ್ರೆಯು ಶೈಕ್ಷಣಿಕ, ಧಾರ್ಮಿಕ, ಆಧ್ಯಾತ್ಮಿಕ, ವೈಚಾರಿಕ, ವ್ಯಾವಹಾರಿಕ (ಲೌಕಿಕ) ಹಾಗೂ ಸಾಹಿತ್ಯಿಕ ನೆಲೆಗಟ್ಟನ್ನು ಹೊಂದಿದೆ. ಹಾಗೂ ಆಬಾಲವೃದ್ಧರಾದಿಯಾಗಿ ಹೆಣ್ಣು-ಗಂಡೆಂಬ ಭೇದವಿಲ್ಲದೆ, ಅನಕ್ಷರಸ್ಥನಿಂದ ಹಿಡಿದು ವಿಜ್ಞಾನಿ, ರಾಜಕಾರಣಿಗಳವರೆಗೆ ಎಲ್ಲರಿಗೂ ಜ್ಞಾನದ ರಸದೌತಣ ಉಣಬಡಿಸುವ ಪಾಕಶಾಲೆಯಾಗಿತ್ತು, ಪಾಠಶಾಲೆಯೂ ಆಗಿತ್ತು. ಮತ್ತು, ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ತಕ್ಕಂಥ ಧಾರ್ಮಿಕ ವೇದಿಕೆಯಾಗಿತ್ತು.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಒಂದು ಸಹಸ್ರ ಹೆಚ್ಚು ವರ್ಷಗಳಿಗೂ ಹಿಂದೆ ಸಂಸ್ಥಾಪಿಸಿದ ಸುತ್ತೂರು ಮಠವು ಈಗ ಪರಮ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನ ದಲ್ಲಿ, ಹಲವು ರೀತಿಯಲ್ಲಿ ಸಮಾಜದ ಶಾಶ್ವತ ಮೌಲ್ಯ ಗಳನ್ನು ಎತ್ತಿಹಿಡಿಯಲು ಶ್ರಮಿಸುತ್ತಿದೆ. ಇದರ ಒಂದು ವ್ಯಕ್ತ ರೂಪವೇ ಸುತ್ತೂರು ಜಾತ್ರೆ. ಪರಮ ಪೂಜ್ಯ ಲಿಂಗೈಕ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಉತ್ತರಾಧಿಕಾರಿಗಳಾದ ಈಗಿನ ಶ್ರೀಗಳು ವೀರ ಸನ್ಯಾಸಿ ವಿವೇಕಾನಂದ ರಂತೆ ಅಲೌಕಿಕ (ಆಧ್ಯಾತ್ಮಿಕ) ಜಗತ್ತಿನಲ್ಲಿದ್ದರೂ ಲೌಕಿಕ ಜನರ ಏಳಿಗೆಗಾಗಿ ಸದಾ ಹಂಬಲಿಸುತ್ತಾ 'ಕಾಯಕಯೋಗಿ' ಗಳಾಗಿದ್ದಾರೆ.

ಈ ಜಾತ್ರೆಯ ಸೊಬಗನ್ನು ಯಾರೇ ಆಗಲಿ ಅನುಭವಿಸಿಯೇ ತಿಳಿಯಬೇಕು. ರಥೋತ್ಸವ, ತೆಪ್ಪೋತ್ಸವ, ಧಾರ್ಮಿಕ ಪೂಜಾ ಕೈಂಕರ್ಯ ಗಳು, ಧರ್ಮ ಸಮ್ಮೇಳನ, ಸಾಮೂಹಿಕ ವಿವಾಹ, ಭಜನಾ ಮೇಳ, ಕುಸ್ತಿ ಪಂದ್ಯಾವಳಿ, ದನಗಳ ಜಾತ್ರೆ, ವಸ್ತುಪ್ರದರ್ಶನ, ಕೃಷಿ ಮೇಳ, ಸಂವಾದ ಗೋಷ್ಠಿಗಳು, ಜನಪದ ಕಲೆಗಳ ಪ್ರದರ್ಶನ, ಕಲಾವಿದರಿಗೆ ಪ್ರೋತ್ಸಾಹ, ಸನ್ಮಾನ, ಕ್ರೀಡಾಕೂಟಗಳು, ಚಿತ್ರಕಲಾ ಸ್ಪರ್ಧೆಗಳು, ಕರಕುಶಲ ಸ್ಪರ್ಧೆ,

ಸಾಂಸ್ಕೃತಿಕ ಮೇಳ, ರಸಪ್ರಶ್ನೆ, ಸೋಬಾನೆ ಪದ, ರಂಗೋಲಿ ಸ್ಪರ್ಧೆ ಇತ್ಯಾದಿ. ಕರ್ನಾಟಕ ವೈಭವ ಧ್ವನಿ-ಬೆಳಕು ಕಾರ್ಯಕ್ರಮ ಅತ್ಯದ್ಭುತವಾದದ್ದು. ಜನಪದ ಜಾತ್ರೆ, ಜನಪದ ಜಾದೂ, ಜನಪದ ಸಂಜೆ ಮತ್ತು ಪ್ರತಿದಿನ ಮೂರು ನಾಟಕಗಳು, ಆರೋಗ್ಯ ತಪಾಸಣೆ, ನಗೆ ಉತ್ಸವ, ಮಾತನಾಡುವ ಗೊಂಬೆ, ಶಿವಕಥಾ ಸಂಕೀರ್ತನೆ, ವಚನ ಗಾಯನ, ಕೈಲಾಸ ಮಾನಸಸರೋವರ ಯಾತ್ರೆಯ ಪ್ರಾತ್ಯಕ್ಷಿಕೆ, ಶೂದ್ರತಪಸ್ವಿ ನಾಟಕ, ಭಕ್ತಿಗೀತೆಗಳ ಗಾಯನ, ಮಂಟೇಸ್ವಾಮಿ ಕಥಾಪ್ರಸಂಗ ನಾಟಕ, ವಿವಿಧ ನೃತ್ಯರೂಪಕಗಳು, ಶ್ರೀಮಠದ ಇತಿಹಾಸ ಕುರಿತ ಲೇಸರ್ ಬೆಳಕಿನ ಪ್ರದರ್ಶನ, ಬೀದಿ ನಾಟಕಗಳು, ಸ್ನೇಹ-ಸೌಹಾರ್ದ-ಶಾಂತಿ-ಪ್ರಾರ್ಥನಾ ಸಭೆಗಳು, ಪಥ-ಸಂಚಲನ, ಧರ್ಮಸಂದೇಶ, ಹಾಲ್ಹರವಿ ಉತ್ಸವ, ಕ್ಷೀರಾಭಿಷೇಕ, ಹಸಿರುವಾಣಿ ಅಲಂಕಾರ, ಕೊಂಡೋತ್ಸವ, ಲಕ್ಷದೀಪೋತ್ಸವ, ವಟುಗಳಿಗೆ ಶಿವದೀಕ್ಷೆ, ಬೆಳ್ಳಿ ಮತ್ತು ಮುತ್ತಿನ ಪಲ್ಲಕ್ಕಿಯಲ್ಲಿ ದೇವರ ಉತ್ಸವ, ದೋಣಿ ವಿಹಾರ, ಮದ್ದು-ಬಾಣಬಿರುಸುಗಳ ಪ್ರದರ್ಶನ. ಪ್ರಾತಃಕಾಲ 4 ಗಂಟೆಯಿಂದ ಮಧ್ಯ ರಾತ್ರಿ 12-00 ಗಂಟೆವರೆಗೂ ನಡೆಯುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳು. ಹೀಗೆ ಒಂದೇ, ಎರಡೇ, ಏಕಕಾಲದಲ್ಲಿ ಹಲವು ಹತ್ತು ಕಡೆಗಳಲ್ಲಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆದರೂ ಎಲ್ಲೆಲ್ಲೂ ಜನಸಾಗರ, ಟ್ರಾಫಿಕ್ ಜಾಮ್, ಮೊಬೈಲ್ ಜಾಮ್ ಸಾಮಾನ್ಯವಾಗಿತ್ತು. ಇಷ್ಟಾದರೂ ಎಲ್ಲಿಯೂ ಒಂದು ಸಣ್ಣ ಜಗಳವಾಗಲಿ, ಅಹಿತಕರ ಘಟನೆಯಾಗಲಿ ನಡೆಯಲಿಲ್ಲ. ಧೂಮಪಾನವೊಂದನ್ನು ಬಿಟ್ಟರೆ ಬೇರೆ ಯಾವುದೇ ಕೆಟ್ಟ ಚಟ-ಹವ್ಯಾಸಗಳು ಜಾತ್ರೆಯ ಅವಧಿಯಲ್ಲಿ ಎಲ್ಲೂ ಕಂಡುಬರಲಿಲ್ಲ. ಇಂದಿನ ದಿನಗಳಲ್ಲಿ ಇದೂ ಒಂದು ಪವಾಡವೇ.

ವಿವಿಧ ರಾಜಕೀಯ ಪಕ್ಷದ ಮುಖಂಡರು, ನೇತಾರರು, ಮುತ್ಸದ್ದಿಗಳು ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿಯನ್ನು ರಕ್ಷಿಸುವ ಭಾಷಣಗಳು ನಾಡಿನ ಪ್ರಗತಿಯ ಬಗ್ಗೆ ಅವರು ಹೊಂದಿರುವ ಧೋರಣೆಗಳು, ಕಾಳಜಿಗಳನ್ನು ಪ್ರತಿಧ್ವನಿಸುತ್ತಿದ್ದವು. ಘನತೆವೆತ್ತ ಮಾಜಿ ರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ ರವರ ಭಾಷಣ, ವಿದ್ಯಾರ್ಥಿಗಳೊಂದಿಗೆ ಸಂವಾದ, ವಿವಿಧ ಧಾರ್ಮಿಕ ಕ್ಷೇತ್ರಗಳ ಸ್ವಾಮೀಜಿಗಳ ಧರ್ಮಸಂದೇಶ, ಮಾರ್ಗದರ್ಶನಗಳು, ನೂರಾರು ಕಲಾತಂಡಗಳ, ಕಲಾವಿದರಿಂದ ನಡೆದ ಮನಸೂರೆಗೊಳ್ಳುವ ಪ್ರದರ್ಶನಗಳು ಇವೆಲ್ಲವೂ ರೋಮಾಂಚನವನ್ನುಂಟು ಮಾಡುತ್ತಿದ್ದವು.

ಬಸವಣ್ಣನವರು 12 ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಉಂಟುಮಾಡಿದ ವೈಚಾರಿಕ ಕ್ರಾಂತಿಯು ಈಗ ಬಹುಶಃ ಸುತ್ತೂರಿನಲ್ಲಿ ಮಾರ್ದನಿಸುತ್ತಿದೆಯೇನೋ ಎಂದೆನಿಸಿದ್ದರೆ ಯಾರಿಗೂ ಆಶ್ಚರ್ಯವಿಲ್ಲ. ಶ್ರೀಗಳ ದೂರದೃಷ್ಟಿಯೂ ಅದನ್ನೇ ಆಶಿಸಿರಬಹುದು.

ಸಂತರ ನುಡಿಗಡಣ ಸಾಕಾರಗೊಳ್ಳುತ್ತಿರುವುದು ಶ್ರೀಕ್ಷೇತ್ರ ಸುತ್ತೂರಿನ ಜಾತ್ರೆಯಲ್ಲಿ ಎಂದರೆ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಕಲ್ಯಾಣದಲ್ಲಿ ಪ್ರತಿದಿನವೂ ಲಕ್ಷದ ಮೇಲೆ ಎಂಬತ್ತಾರು ಸಾವಿರ ಜಂಗಮರಿಗೆ ಬಸವಣ್ಣನವರು ದಾಸೋಹ ನಡೆಸುತ್ತಿದ್ದರೆಂದು ಕಥೆ ಕಾವ್ಯಗಳಲ್ಲಿ ಕೇಳಿದ್ದೆವು. ಅದನ್ನು ಈಗ ಸುತ್ತೂರು ಜಾತ್ರೆಯಲ್ಲಿ ಕಣ್ಣಾರೆ ಕಂಡೆವು. ಐವತ್ತಕ್ಕೂ ಹೆಚ್ಚು ಕೊಪ್ಪರಿಗೆಗಳಲ್ಲಿ ಅನ್ನಬ್ರಹ್ಮನ ನರ್ತನ!. ಇದೆಲ್ಲವೂ ಒಂದು ಅಚ್ಚರಿಯೆನಿಸುತ್ತಿತ್ತು.

ಸುತ್ತೂರು ಜಾತ್ರೆಯ ವೈಶಿಷ್ಟ್ಯವನ್ನು ಸವಿಯಲು ಮುಂದಿನ ವರ್ಷವಾದರೂ ನೀವೆಲ್ಲ ಸುತ್ತೂರಿಗೆ ಬನ್ನಿ. ಒಳಗಣ್ಣು ಇದ್ದವರಿಗೆ ಮಾತ್ರ ಈ ಜಾತ್ರೆಯ ತೇಜೋವೈಭವ ಅರಿವಿಗೆ ಬರುತ್ತದೆ. ಇಲ್ಲದಿದ್ದರೆ ಎಲ್ಲಾ ಜಾತ್ರೆಗಳಂತೆ ಇದೂ ಒಂದು ಹತ್ತರಲ್ಲಿ ಹನ್ನೊಂದು ಎನ್ನಿಸಬಹುದು. ಎಲ್ಲವೂ ಅವರವರ ಭಾವಕ್ಕೆ, ಅವರವರ ಭಕುತಿಗೆ.

---

## Information Support System in Science and Mathematics for Rural Higher Secondary Schools

## A Brief Report

The above project was formally inaugurated on 16.12.2008 at JSS Auditorium, Jayanagar, Bangalore. Dr. R. Chidambaram, Principal Scientific Advisor, Govt. of India inaugurated the project in the gracious presence of His Holiness Jagadguru Sri Shivarathri Deshikendra Mahaswamiji. Sri S.B. Muddappa, Former Chief Secretary, Govt. of Karnataka presided. Prof. M. I. Savadatti, Former Vice-Chancellor, Mangalore University, Prof. V. G. Talawar, Vice-Chancellor, University of Mysore, Sri G. Kumara Naik, Commissioner for Public Instruction, Govt. of Karnataka were the Chief Guests. A large number of educationists, comprising former Vice-Chancellors, distinguished Professors, Senior Scientists, IT experts, teachers and students and mediapersons were present.

The inaugural function began with a prayer by the students of JSS High School, Jayanagar, Bangalore. Prof. K. Siddappa, Former Vice-Chancellor, Bangalore University and Hon. Director of JSS Foundation, who is also in charge of implementation of the project, welcomed the

gathering and gave the introductory remarks explaining its salient features. JSS Mahavidya - peetha would provide necessary infrastructure in their chosen High Schools under this project, to access the contents created by the experts.

Dr. R. Chidambaram, in his inaugural address, said that this is a unique project and first of its kind in the country aimed at providing the much-needed information and support system to improve science and mathematics education in rural areas. He said that, in this knowledge era, the three most essential requirements for quality education are Computers, Connectivity and Content. Due to the efforts of the government there is a good progress in respect of providing computers and connectivity. The work on establishing knowledge network in the country is almost complete and would be commissioned soon, he said. However, developing a suitable content, Dr. R. Chidambaram said, is a challenging job. He was confident that the team of experts led by Dr. K. Siddappa would develop a good Digital Information Support System comprising quality education modules employing advanced techniques of multimedia. The country required talented and well-trained human resource and, in this context, this project acquired a special significance. He also lauded the dedicated services of JSS Mahavidyapeetha in the field of education and its commitment for rural development.

Prof. M.I. Savadatti, 'in his address as Chief Guest, stressed the need for strengthening primary and secondary education, particularly in the rural areas. The higher secondary school education, he said, constitutes an important stage in the educational career of every student as only at this stage the students' minds are moulded. He said that the study of science and mathematics has become difficult more because of lack of proper learning information. He appreciated the interest shown by His Holiness Swamiji in the study of science and also the work of JSS Mahavidyapeetha and JSS Foundation for Science and Society in this regard. He also thanked the Principal Scientific Adviser for sponsoring this important project to the vidyapeetha.

Prof. V.G. Talawar started his address by recalling the great strides that the JSS Mahavidyapeetha is making in every sector of education and at all levels. He appreciated the meticulous care the Swamiji is taking in providing quality education to rural students. He was all praise for the efforts of JSS Foundation for Science and Society to improve the quality of primary and secondary education in the rural areas with special emphasis on Science and Mathematics.

Sri G. Kumar Naik, in his address, narrated the initiatives of the State Government to improve the standards of primary and secondary education. He said that the Government of Karnataka has introduced quality accreditation programme and testing of teaching and learning to ascertain difficult subjects and difficult areas. He also said that the Government of Karnataka is first in the entire country in many respects including the best teachers-student ratio. He said that his Department is eagerly awaiting for the success of this pilot project following which the Government would be happy to extend the project to the entire State.

In his presidential remarks, Sri S. B. Muddappa said that the progress of the country requires advances in science and technology and their applications. In this context, this project is very important, he said. He thanked the Principal Scientific Advisor to Govt. of India for taking keen interest in this unique project and hoped that it would be successful in meeting the requirements of teachers and students.

Smt. Muktha B. Kagali, Coordinator, JSS Foundation for Science and Society, proposed Vote of Thanks. Sri S. Chandrashekar Ushala of JSS PU College, Jayanagar, Bangalore compered the proceedings.

□



ಸುತ್ತೂರು ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ವಸತಿಗೃಹಗಳು ಹಾಗೂ ಉಪಹಾರ ಕೇಂದ್ರ ಕಟ್ಟಡಗಳ ಶಿಲಾನ್ಯಾಸವನ್ನು ರಾಜ್ಯದ ಮುಖ್ಯಮಂತ್ರಿಗಳಾದ ಡಾ. ಬಿ.ಎಸ್. ಯಡಿಯೂರಪ್ಪನವರು ನೆರವೇರಿಸಿದರು. ಚಿತ್ರದಲ್ಲಿ ಪೂಜ್ಯ ಶ್ರೀಗಳು, ಶ್ರೀ ಸಿದ್ಧರಾಮಯ್ಯ, ಕು. ಶೋಭಾ ಕರಂದ್ಲಾಜೆ, ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಮತ್ತು ಶ್ರೀ ವಿ. ಸೋಮಣ್ಣ ನವರು




ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ರಾಷ್ಟ್ರೀಯ ಔಷಧ ಸಪ್ತಾಹವನ್ನು ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ. ಸುರೇಶ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸುತ್ತಿರುವುದು. ಡಾ. ಎಸ್.ಎಸ್. ದೇಶಪಾಂಡೆ, ಡಾ. ಶಿವಕುಮಾರ್, ಡಾ. ಎಂ.ಎಸ್. ಅನಂತರಾಜು ಹಾಗೂ ಶ್ರೀ ಎಸ್.ಎನ್. ರಾವ್ ಅವರುಗಳನ್ನು ಚಿತ್ರದಲ್ಲಿ ಕಾಣಬಹುದು



ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಶ್ರೀ ವಿಲಾಸ್‌ರಾವ್ ದೇಶ್‌ಮುಖ್‌ರವರು ಆರೋಗ್ಯ ಮೇಳವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀಗಳು, ಶ್ರೀ ಸಿದ್ಧಲಿಂಗ ಮಹಾಸ್ವಾಮಿ ಗಳು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಡಿ.ಕೆ. ಶಿವಕುಮಾರ್, ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ರಾಜ್ಯ ಸಚಿವೆ ಶ್ರೀಮತಿ ಸುಬ್ಬಲಕ್ಷ್ಮಿ ಜಗದೀಶನ್ ಮತ್ತು ಶ್ರೀಮತಿ ದೇಶ್‌ಮುಖ್‌ರವರು




ಮೈಸೂರು ನಗರದ ಜಗನ್ಮೋಹನ ಅರಮನೆಯಲ್ಲಿ ರೋಟರಿ ಸಂಸ್ಥೆ ಮತ್ತು ಇನ್ನರ್ ವ್ಹೀಲ್ ಸಂಸ್ಥೆಗಳ ಸಹಯೋಗದಲ್ಲಿ ವಿಶೇಷ ಕಾಳಜಿಯ ಮಕ್ಕಳಿಗಾಗಿ ಏರ್ಪಡಿಸಿದ್ದ "ತಾರೆ ಜಮೀನ್ ಪರ್" ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸರಸ್ವತಿಪುರಂನ ಜೆಎಸ್‌ಎಸ್ ಸಹನಾ ಶಾಲೆಯ ಮಕ್ಕಳು



ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ವಿಜ್ಞಾನ ಮತ್ತು ಸಮಾಜದ ಪ್ರತಿಷ್ಠಾನ ಸಂಯುಕ್ತ ಆಶ್ರಯದಲ್ಲಿ ಜರುಗಿದ ಟೆಲಿಸ್ಕೋಪ್ ನಿರ್ಮಾಣದ ಕಾರ್ಯಾಗಾರದಲ್ಲಿ ಭಾರತ ಸರ್ಕಾರದ ಡಿ.ಎಸ್.ಟಿ. ಮುಖ್ಯಸ್ಥರಾದ ಶ್ರೀ ಅನೂಜ್ ಸಿನ್ಹ, ಪೂಜ್ಯ ಶ್ರೀಗಳು, ಡಾ. ಎಂ.ಐ. ಸವದತ್ತಿ, ಶ್ರೀ ಬಿ.ಎನ್. ಬೆಟ್‌ಕೆರೂರ್




ಜೆಎಸ್‌ಎಸ್ ಪಬ್ಲಿಕ್ ಶಾಲೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಸಹಾಯಕ ಪ್ರಬಂಧಕರಾದ ಶ್ರೀಮತಿ ಭಾರತಿಯವರು ಬಹುಮಾನ ವಿತರಣೆ ಮಾಡುತ್ತಿರುವುದು. ಚಿತ್ರದಲ್ಲಿ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಶ್ರೀ ಎಸ್.ಎ. ರಾಮದಾಸ್, ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪನಿರ್ದೇಶಕರಾದ ಶ್ರೀ ರಾಜೇಂದ್ರ ಪ್ರಸಾದ್ ಹಾಗೂ ಪ್ರಾಂಶುಪಾಲ ಶ್ರೀ ಪರಮೇಶ್ವರಪ್ಪ ಇದ್ದಾರೆ

ಸಂಪಾದಕ: ಆರ್.ಎಸ್. ಪೂರ್ಣಾನಂದ
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 2548211, 2548212 ಫ್ಯಾಕ್ಸ್: 2548218 e-mail: jsspbln@yahoo.com ಮುದ್ರಣ: ಭಾಸ್ಕರ್ ಪ್ರಿಂಟರ್ಸ್, ಮೈಸೂರು